

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

RNI REG No. : KARKAN/2016/75068

Volume : 07 Issue : 54 Friday 01-11-2024 E-mail : maruti.b.hosamani76@gmail.com Page: 4 Price : Rs. 1/-


## ಸದ್ದು ಮಾಡುತ್ತಿದೆ "ತಾರಕೇಶ್ವರ" ಟ್ರೇಲರ್

**ಸಿಹಿ ಕಹಿ ಸುದ್ದಿ**



**ಬೆಂಗಳೂರು :** ಭಕ್ತಿ ಪ್ರಧಾನ 'ತಾರಕೇಶ್ವರ'– 'ಅಸುರ ಕುಲತಿಲಕ' ಅಡಿ ಬರಹದ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭವು ರೇಣುಕಾಂಬ ಸ್ಟುಡಿಯೋದಲ್ಲಿ ಅದ್ದೂರಿಯಾಗಿ ನಡೆಯಿತು.

ವೇದಾಂತ ಆಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮಿಗಳು ಮೊದಲ ಟ್ರೇಲರ್, ಚಲನ ಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಎರಡನೇ ಟ್ರೇಲರನ್ನು ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್ಕೆ? ವಿಶ್ವನಾಥ್, ಅಂಬೇಡ್ಕರ್ ಸೇನೆಯ ಅಧ್ಯಕ್ಷ ಮೂರ್ತಿ, ಕನ್ನಡ ಸಂಘದ ಅಧ್ಯಕ್ಷ ಬಸವರಾಜ ಪಡುಕೋಟೆ ಅನೇಕ ಗಣ್ಯರುಗಳು ಉಪಸ್ಥಿತರಿದ್ದರು.

ಪಾತ್ರದ ಕುರಿತು ಗಣೇಶ್ರಾವ್ ಕೇಸರ್ಕರ್ ಮಾತನಾಡಿ– ನಮ್ಮ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದೆ. ಸೆನ್ಸಾರ್‌ನವರು ಪ್ರಶಂಸೆ ವ್ಯಕ್ತಪಡಿಸಿ ಯಾವುದೇ ದೃಶ್ಯಕ್ಕೆ ಆಕ್ಷೇಪ ವ್ಯಕ್ತಪಡಿಸದೆ 'ಯು' ಪ್ರಮಾಣ ಪತ್ರ ನೀಡಿದ್ದಾರೆ. ನಾನು ಯಾವತ್ತೂ ಹಣಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ. ಉತ್ತಮ ಚಿತ್ರವನ್ನು ಕನ್ನಡಿಗರಿಗೆ ಕೊಡಬೇಕೆಂದು ನಿರ್ಮಾಣ ಮಾಡಿದ್ದೇನೆ. ಇಲ್ಲಿ ಬಂದಿರುವ ಅತಿಥಿಗಳು ನನ್ನ ಮೇಲಿನ ಪ್ರೀತಿಯಿಂದ ಬಂದಿದ್ದಾರೆ. ಪೌರಾಣಿಕ ಚಿತ್ರ ಮಾಡುವುದು ಸುಲಭದ ಮಾತಲ್ಲ. ಸೆಟ್ನಲ್ಲಿ ಲೈಟಿನ ಕಂಬವು ಕಾಣುವಂತಿಲ್ಲ. ನಿರ್ಮಾಪಕರ ಕಷ್ಟ ಏನೆಂದು ಈಗ ಅರ್ಥವಾಗಿದೆ. ಹೊಸ ಆಲೋಚನೆ ಎನ್ನುವಂತೆ ಈಗಾಗಲೇ ಟಿಕೆಟ್ಟು ಮುದ್ರಣ ಮಾಡಿಸಲಾಗಿ, ದರ ನೂರು ರೂಪಾಯಿ ಇರುತ್ತದೆ. ಇದನ್ನು ಖರೀದಿಸಿದವರಿಗೆ ಕರ್ನಾಟಕದ ಯಾವುದೇ ಜಿಲ್ಲೆ, ತಾಲ್ಲೂಕು ಕೇಂದ್ರದಲ್ಲಿ ಸಿನಿಮಾ ವೀಕ್ಷಿಸಬಹುದು. ನಿಮ್ಮೆಲ್ಲರ ಪ್ರೋತ್ಸಾಹದಿಂದ ಇಲ್ಲಿಯವರೆಗೂ 333 ಚಿತ್ರಗಳಲ್ಲಿ ನಟಿಸಿದ್ದೇನೆ ಎಂದರು.

ನಿರ್ಮಾಪಕರ ಕೋರಿಕೆಗೆ ಮನ್ನಣೆ ನೀಡಿದ ಆಹ್ವಾನಿತರು ಸ್ಥಳದಲ್ಲೇ ಅಂದಾಜು ಐವತ್ತು ಸಾವಿರದಷ್ಟು ಟಿಕೇಟಗಳನ್ನು ಸಗಟು ಖರೀದಿಸಿದರು. ಹಾಗೂ ಭಾರತೀಯ ಅಂಚೆ ಇಲಾಖೆಯವರು ಹೊರ ತಂದಿರುವ 'ತಾರಕೇಶ್ವರ' ಚಿತ್ರ ಇರುವ ಅಂಚೆ ಚೀಟಿಯನ್ನು ಗಣ್ಯ ಮಾನ್ಯರುಗಳು ಅನಾವರಣ ಗೊಳಿಸಿದರು. ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿರುವ ಪುರುಷೋತ್ತಮ್ ಓಂಕಾರ್ ಹೇಳುವಂತೆ ಶಿವಪುರಾಣದ ಕಥೆಯಲ್ಲಿ ತಾರಕಾಸುರ ಅಸುರ ಆದರೂ ಕೂಡ, ತಂದೆ ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಲು ತಪ್ಪಸ್ಸು ಮಾಡಿ ತನಗೆ ಸಾವು ಬರ ಬಾರದೆಂದು ಬ್ರಹ್ಮನಿಂದ ವರ ಪಡೆದು ಕೊಳ್ಳುತ್ತಾನೆ. ಮುಂದೆ ಯಾವ ರೀತಿ ಹೋರಾಟ ಮಾಡುತ್ತಾನೆಂದು ಕುತೂಹಲದ ಸನ್ನಿವೇಶ ಗಳೊಂದಿಗೆ ತೋರಿಸಲಾಗಿದೆ. ಗಣೇಶ್ರಾವ್ ಕೇಸರ್ಕರ್ ರವರು ಶಿವ, ಕುರುಡ, ತಾರಕೇಶ್ವರ ಮತ್ತು ಮಹಾರಾಜ ಹೀಗೆ ನಾಲ್ಕು ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಅವರ ಪುತ್ರ ಪ್ರಜ್ವಲ್ ಕೇಸರ್ಕರ್ ಇಂದ್ರನಾಗಿ ಕಾಣಿಸಿ ಕೊಂಡಿದ್ದಾರೆ. ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ ಎಂಬುದಾಗಿ ಮಾಹಿತಿ ಬಿಚ್ಚಿಟ್ಟರು.

ರಾಜನ ಮಗಳು, ಶಿವ ಭಕ್ತೆ, ಪಾರ್ವತಿಯಾಗಿ ರೂಪಾಲಿ ನಾಯಕಿ. ತಾರಕೇಶ್ವರನನ್ನು ಸಂಹಾರ ಮಾಡುವ ಬಾಲ ಸುಬ್ರಹ್ಮಣ್ಯನಾಗಿ ಬಾಲ ನಟಿ ಋತುಸ್ಪರ್ಶ ಕಾಣಿಸಿ ಕೊಂಡಿರುವುದು ವಿಶೇಷ. ಇವರೊಂದಿಗೆ ಸುಮಿತ ಪ್ರವೀಣ್, ಅನ್ನಪೂರ್ಣ, ರತಿಮನ್ಮಥರಾಗಿ ವಿಕ್ರಂಸೂರಿ–ನಮಿತಾರಾವ್, ಉಳಿದಂತೆ ಶಂಕರಭಟ್,ಶ್ರೀವಿಷ್ಣು, ಜಿಮ್ಮಿವು, ಎನ್.ಟಿ ರಾಮಸ್ವಾಮಿ, ಗುರುರಾಜ್, ಹೆಜ್ಜಾಜಿ ಮಹಾದೇವ, ಬಸವರಾಜ ದೇಸಾಯಿ, ವೀರೇಂದ್ರ ಬೆಳ್ಳಿಚುಕ್ಕಿ, ಮಧು ಕಾರ್ತಿಕ್, ಗೀತಾ, ರಾಜೇಶ್ವರಿ ಪಾಂಡೆ, ರಕ್ಷಾಗೌಡ, ರಂಜಿತ, ಶ್ರೀರಾಮ್, ರೂಪ ಮುಂತಾದವರು ಅಭಿನಯಿಸಿದ್ದಾರೆ.

ತುಳಜಾಬಾಯಿ, ರೂಪ.ಎಸ್.ದೊಡ್ಮನಿ, ಡಾ, ಸುಮಿತ ಪ್ರವೀಣ್, ಬಸವರಾಜ್ ದೇಸಾಯಿ ಸಹ ನಿರ್ಮಾಪಕರಾಗಿದ್ದಾರೆ. ಸಂಗೀತ ರಾಜ್ ಭಾಸ್ಕರ್, ಛಾಯಾಗ್ರಹಣ ಮುತ್ತುರಾಜ್, ಸಂಕಲನ ಅನಿಲ್ ಕುಮಾರ್, ನೃತ್ಯ ಕಪಿಲ್, ಪತ್ರಿಕಾ ಸಂಪರ್ಕ ಚಂದ್ರಶೇಖರ, ಡಾ, ಪ್ರಭು ಗಂಜಿಹಾಳ,ಡಾ, ವೀರೇಶ ಹಂಡಿಗಿ, ನಿರ್ಮಾಣ ನಿರ್ವಹಣೆ ದೀಪಕ್ಬಾಬು ನಿರ್ವಹಿಸಿದ್ದಾರೆ.

* * *

ವರದಿ :
**ಡಾ.ಪ್ರಭು ಗಂಜಿಹಾಳ**
**ಮೊ:9448775346**

## ಚರಂಡಿಯಲ್ಲಿ ಕಾಲು ಜಾರಿ ಬಿದ್ದಿರುವ ಆಕಳನ್ನು ಜೀವಂತವಾಗಿ ರಕ್ಷಣೆ ಮಾಡಿದ ಜಮಖಂಡಿ ಅಗ್ನಿಶಾಮಕ ದಳದ ಸಿಬ್ಬಂದಿಯವರು



**ಸಿಹಿ ಕಹಿ ಸುದ್ದಿ**

**ಜಮಖಂಡಿ :** ಬಾಗಲಕೋಟ ಜಿಲ್ಲೆಯ ಜಮಖಂಡಿಯ ನಗರದ ನೀರಾವರಿ ಇಲಾಖೆಯ ವಾಸತಿ ಗೃಹಗಳ ಹತ್ತಿರ ಚರಂಡಿಯಲ್ಲಿ ಆಕಳು ಕಾಲು ಜಾರಿ ಬಿದ್ದಿರುವದನ್ನು ಕಂಡು ಶ್ರೀ ಇಬ್ರಾಹಿಂ ಗೊಗಿ ಶಿಕ್ಷಕರು ಜಮಖಂಡಿ ಅಗ್ನಿಶಾಮಕ ಠಾಣೆಗೆ ಕರೆ ಮಾಡಿ ತಿಳಿದಾಕ್ಷಣ ಘಟನಾ ಸ್ಥಳಕ್ಕೆ ಶ್ರೀ ರಾಜು ತಳವಾರ ಅಗ್ನಿಶಾಮಕ ಠಾಣಾಧಿಕಾರಿಯವರ ನೇತೃತ್ವದ ತಂಡ ಜಲ ವಾಹನ ಮತ್ತು ಸಿಬ್ಬಂದಿ ಯವರು ಘಟನಾ ಸ್ಥಳಕ್ಕೆ ರಕ್ಷಣಾ ಸಾಮಗ್ರಿ ಗಳೊಂದಿಗೆ ಆಗಮಿಸಿ 10 ಅಡಿ ಆಳದ ಅಳತೆಯ ಒಳ ಚರಂಡಿಯಲ್ಲಿ ಬಿದ್ದ ಬೀದಿ ಆಕಳನ್ನು ಕಷ್ಟ ಪಟ್ಟು ಸುಮಾರು 01:00 ಒಂದು ಗಂಟೆಗಳ ಕಾಲ ಕಾರ್ಯಚರಣೆಯನ್ನು ಮಾಡಿ ಆಕಳನ್ನು ಜೀವಂತವಾಗಿ ಚರಂಡಿಯಿಂದ ಹೊರ ತೆಗೆದು ರಕ್ಷಣೆ ಮಾಡಲಾಯಿತು. ಆಕಳ ಪ್ರಾಣ ಕಾಪಾಡಿದ ಜಮಖಂಡಿ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಯವರಿಗೆ ಸೇರಿರುವ ಸಾರ್ವಜನಿಕರು ಹಾಗೂ ವಸತಿ ಗೃಹದ ಸಿಬ್ಬಂದಿಯವರು ಚಪ್ಪಾಳೆ ಮೂಲಕ ಧನ್ಯವಾದಗಳನ್ನು ತಿಳಿಸಿದರು. ಹಾಗೂ ಹಸ್ತಲಾಘವ ಮಾಡಿ ಅಭಿನಂದಿಸಿದರು. ಬೀದಿ ಆಕಳು ಹಸುವಿನ ಜೀವ ಉಳಿಸಿವ ಕೆಲಸಕ್ಕೆ ಅಗ್ನಿಶಾಮಕ ದಳದವರ ಸೇವೆ ಅಮೋಘ ಎಂದು ಬಣಿಸಿದರು. ಈ ರಕ್ಷಣಾ ಕಾರ್ಯಚರಣೆಯಲ್ಲಿ ಶ್ರೀ ರಾಜು ತಳವಾರ ಅಗ್ನಿಶಾಮಕ ಠಾಣಾಧಿಕಾರಿಯವರು, ಶ್ರೀ ಏನ್ ಪಿ ಹೂಗಾರ ಂಖಔ, ಸಿಬ್ಬಂದಿಗಳಾದ. ಶ್ರೀ ಅಶೋಕ್ ಹಳಿಗೌಡರ, ಶ್ರೀ ಪ್ರಕಾಶ ಯಲಶೆಟ್ಟಿ , ಆನಂದ್ ಹನಬರಟ್ಟಿ, ಶ್ರೀ ಕೆ.ಬಿ. ಮುಲ್ಲಾ, ಶ್ರೀಧರ್ ಮಾಳಶೆಟ್ಟಿ,ಶ್ರೀ ಬಿ.ಎಸ್ ರೊಳ್ಳಿ, ಶ್ರೀ ಬಿ.ಎಸ್. ಬಿರಾದಾರ್, ಶ್ರೀ ಎಸ್.ಎಸ್. ಕುಂಬಾರ,ಶ್ರೀ ಬಿ.ವೈ. ಮೆಳ್ಳಿಗೇರಿ. ಸ್ಥಳೀಯರು ಕಾರ್ಯಾಚರಣೆಯಲ್ಲಿ ಹಾಜರಿದ್ದರು.













# ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ



**ಮೂಡಲಗಿ :** ಕಲಾಲ ಸಮಾಜ ಸಣ್ಣ ಸಮಾಜವಾಗಿದ್ದರು ಕೂಡ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಚಂದ್ರನ ಅನುಯಾಯಿಗಳಾಗಿರುವುದು ಅತ್ಯಂತ ಹೆಮ್ಮೆ ಪಡುವ ಸಂಗತಿಯಾಗಿದೆ.ಈ ಸಮುದಾಯದ ಜನರಿಗೆ ಸಾಂಸ್ಕೃತಿಕ, ಧಾರ್ಮಿಕ, ಕೌಟುಂಬಿಕ ಈ ರೀತಿಯ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಮುದಾಯದ ಭವನದ ಅವಶ್ಯಕತೆ ಇದ್ದು. ಇದನ್ನು ಮನಗಂಡು ಭವನ ನಿರ್ಮಾಣ ಮಾಡಲು ದೃಢ ಹೆಜ್ಜೆ ಇಟ್ಟಿರುತ್ತೇನೆಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಹೇಳಿದರು. ಬುಧವಾರ ಕಲ್ಲೋಳಿ ಪಟ್ಟಣದ ಶ್ರೀರಾಮ ಮಂದಿರ ಹತ್ತಿರ ರಾಜ್ಯಸಭಾ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಡಿ ರೂ. 10 ಲಕ್ಷ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೇರವೇರಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಜನರ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವ ಪ್ರವೃತ್ತಿ ಕಡಿಮೆಯಾಗಿದೆ. ವೈಯಕ್ತಿಕ ಲಾಭ ಎಂಬ ಮನೋಭಾವ ಎಲ್ಲರಲ್ಲೂ ಮೂಡುತ್ತಿದೆ. ಈ ಮನೋಭಾವ ಬದಿಗಿರಿಸಿ ಸಮಾಜ ಕಟ್ಟುವ ಕೆಲಸಕ್ಕೆ ಕೈಜೋಡಿಸಬೇಕು ಎಂದರಲ್ಲದೇ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮದುವೆ ಸಮಾರಂಭಗಳಿಗೆ ಅದರಲ್ಲೂ ಬಡ ಕುಟುಂಬದ ಜನರಿಗೆ ಅನುಕೂಲವಾಗುವಂತೆ ಈ ಸಮುದಾಯ ಭವನ ನಿರ್ಮಾಣ ಮಾಡಲಾಗುತ್ತದೆ ಪಟ್ಟಣದ ಸಮಾಜ ಬಂಧುಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಪ್ರಮುಖರಾದ ಸುರೇಶ ಕಬ್ಬೂರ, ದತ್ತು ಕಲಾಲ, ಚಂದು ಕಲಾಲ, ಮನೋಹರ ಕಲಾಲ, ಬಸವರಾಜ ಕಡಾಡಿ, ಶ್ರೀಶೈಲ ತುಪ್ಪದ, ಲೋಹಿತ ಕಲಾಲ, ಶಾನೂರ ಕಲಾಲ, ಕಿರಣ ಕಲಾಲ, ಗುರುನಾಥ ಮಧಬಾಂವಿ, ಶಿವಲಿಂಗ ಕುಂಬಾರ, ದಶಗೀರ ನದಾಫ್, ಸೋಮಲಿಂಗ ಹಡಗಿನಾಳ ಸೇರಿದಂತೆ ಅನೇಕ ಯುವಕರು ಉಪಸ್ಥಿತರಿದ್ದರು.

# ರೈತರು ಆರ್ಥಿಕವಾಗಿ ಸಬಲರಾಗಲು ಸಮಗ್ರ ಕೃಷಿ ಅಳವಡಿಸಿಕೊಳ್ಳಬೇಕು: ಕುಲಪತಿ ಪ್ರೊ.ಪಿ.ಎಲ್.ಪಾಟೀಲ್

**ವಿಜಯಪುರ :** ರೈತರು ಆರ್ಥಿಕವಾಗಿ ಸದೃಢವಾಗಬೇಕಾದರೆ ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಳ್ಳುವುದರ ಜೊತೆಗೆ ಸಮಗ್ರ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಪಿ.ಎಲ್.ಪಾಟೀಲ ಸಲಹೆ ನೀಡಿದರು.



ಮುದ್ದೇಬಿಹಾಳ ತಾಲೂಕಿನ ಬಸರಕೋಡ ಗ್ರಾಮದಲ್ಲಿ ಶ್ರೀ.ಪವಾಡ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ವಿಜಯಪುರದ ಕೃಷಿ ಕಾಲೇಜಿನ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ "ಕೃಷಿ ಸಂಪದ" ಕೃಷಿ ತಂತ್ರಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಈ ಕೃಷಿ ತಂತ್ರಜ್ಞಾನ ಮತ್ತು ವಸ್ತುಪ್ರದರ್ಶನದ ಪ್ರಯೋಜನಗಳನ್ನು ಪಡೆದುಕೊಂಡು ತಮ್ಮ ಕೃಷಿ ಉತ್ಪಾದನೆ ಹೆಚ್ಚಿಸಿಕೊಳ್ಳಬೇಕು ಎಂದರು.

ಕೃಷಿ ಉತ್ಪಾದನೆ ಹೆಚ್ಚಿಸಬೇಕಾದರೆ ಮಣ್ಣು ಮತ್ತು ನೀರಿನ ನಿರ್ವಹಣೆ ಬಹಳ ಮುಖ್ಯ. ರೈತರು ನಿಯಮಿತವಾಗಿ ತಮ್ಮ ತಮ್ಮ ಭೂಮಿಯಲ್ಲಿನ ಮಣ್ಣು ಪರೀಕ್ಷೆ ಮಾಡಿಸಿ ಶಿಫಾರಸು ಮಾಡಿದಂತೆಯೇ ಗೊಬ್ಬರ ಬಳಸಬೇಕು. ಇದರಿಂದ ರೈತರು ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ರೈತರು ತೋಟಗಾರಿಕೆ ಬೆಳೆಗಳ ಬಗೆಗೂ ಗಮನಕೊಡಬೇಕು. ಇದರ ಜತೆಗೆ ಕೃಷಿ ಉಪಕಸಬುಗಳಾದ ಕುರಿ, ಕೋಳಿ, ಆಡು ಸಾಕಾಣಿಕೆ, ಜೇನುಕೃಷಿ ಬಗ್ಗೆ ಮಾಹಿತಿ ಪಡೆದುಕೊಂಡು ಇವೆಲ್ಲವನ್ನೂ ರೈತರು ಅಳವಡಿಸಿಕೊಳ್ಳಬೇಕು ಎಂದೂ ಕುಲಪತಿ ಪ್ರೊ.ಪಾಟೀಲ್ ಸಲಹೆ ಕೊಟ್ಟರು.

ಮುಖ್ಯ ಅತಿಥಿಗಳಾಗಿದ್ದ ಧಾರವಾಡ ಕೃಷಿ ವಿಶ್ವವಿದ್ಯಾಲಯ ಶಿಕ್ಷಣ ನಿರ್ದೇಶಕ ಡಾ.ವಿ.ಆರ್.ಕಿರೆಸೂರ್ ಅವರು ಮಾತನಾಡಿ, ಡಿಪ್ಲೋಮಾ ಕೃಷಿ ಮತ್ತು ಕೃಷಿ ಪದವಿಯ ಬಗ್ಗೆ ಸವಿಸ್ತಾರವಾಗಿ ವಿವರಿಸಿ ಗ್ರಾಮೀಣ ಪ್ರದೇಶಗಳ ರೈತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಈ ಕೋರ್ಸ್‌ಗಳಿಗೆ ಪ್ರವೇಶ ಪಡೆದುಕೊಳ್ಳಬೇಕು ಎಂದರು.

ಬಸರಕೋಡ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಎಚ್.ಬಿ.ಮೇಟಿ ಮಾತನಾಡಿ, ವಿಶ್ವವಿದ್ಯಾಲಯಗಳ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳು ರೈತರಿಗೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಜೇನು ಸಾಕಾಣಿಕೆ, ಕುರಿ–ಕೋಳಿ ಸಾಕಾಣಿಕೆ ಮುಂತಾದ ಉಪಕಸಬುಗಳ ಬಗೆಗೆ ಇನ್ನಷ್ಟು ಸೌಲಭ್ಯ ಮತ್ತು ಮಾಹಿತಿಯನ್ನು ತಲುಪಿಸಬೇಕೆಂದರು.

ಶ್ರೀ.ಪವಾಡ ಬಸವೇಶ್ವರ ಸಂಸ್ಥೆಯ ಅಧ್ಯಕ್ಷ ಕೆ.ವಾಯ್.ಬಿರಾದಾರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ರಾಜಶೇಖರ ಬಿರಾದಾರ ಅನುಭವ ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿಜಯಪುರ ಕೃಷಿ ಮಹಾವಿದ್ಯಾಲಯ ವಿದ್ಯಾಧಿಕಾರಿ ಡಾ ಭೀಮಪ್ಪ. ಎ ಮಾತನಾಡಿ ರೈತರನ್ನು ಆಧುನಿಕ ಕೃಷಿಯತ್ತ ಮುಖ ಮಾಡುವಂತೆ ಪ್ರೇರೇಪಿಸುವುದೇ ಕೃಷಿ ತಂತ್ರಜ್ಞಾನ ಮತ್ತು ವಸ್ತುಪ್ರದರ್ಶನದ ಮೂಲ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಹ ಸಂಶೋಧನಾ ನಿರ್ದೇಶಕ ಡಾ.ಆರ್.ಬಿ.ಬೆಳ್ಳಿ, ಧಾರವಾಡ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ.ಸಿ.ಆರ್.ಪಾಟೀಲ, ಕೀಟಶಾಸ್ತ್ರ ತಜ್ಞ ಡಾ.ಎ.ಪಿ.ಬಿರಾದಾರ, ಕೆವಿಕೆ ಮುಖ್ಯಸ್ಥ ಮತ್ತು ರೋಗಶಾಸ್ತ್ರ ತಜ್ಞ ಡಾ.ಎಸ್.ಎಮ್.ವಸ್ತ್ರದ, ತೋಟಗಾರಿಕೆ ತಜ್ಞರಾದ ಕುಶಾಲ, ಡಿ.ಕೆ.ಹರೀಶ, ಮಣ್ಣು ಶಾಸ್ತ್ರ ತಜ್ಞ ಸಿದ್ದರಾಮ ಪಾಟೀಲ, ಬೇಸಾಯ ಶಾಸ್ತ್ರ ತಜ್ಞ ಬಿ.ಟಿ.ನಾಡಗೌಡ, ಬಸರಕೋಡ, ಡವಳಗಿ, ರೂಡಗಿ, ಸಿದ್ದಾಪುರ ಗ್ರಾಮದ ರೈತರು ಮತ್ತು ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಕೃಷಿ ಕಾರ್ಯಾನುಭವ ಶಿಬಿರದ ಸಂಯೋಜಕ ಡಾ.ಆರ್.ಬಿ.ಜೋಳ್ಳಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕೃಷಿ ವಿದ್ಯಾರ್ಥಿ ರಿಹಾನ್ ಮಲಿಕ ಹಳ್ಳೂರ ಕಾರ್ಯಕ್ರಮ ನಿರೂಪಿಸಿದರು, ಸಂಗಮೇಶ ಮಾವಿನಗಿಡದ ವಂದಿಸಿದರು.

# ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಪ್ರಾರಂಭ

**ಕೊಪ್ಪಳ :** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರಿನ ಶೈಕ್ಷಣಿಕ ವರ್ಷ 2023–24ನೇ (ಜುಲೈ ಆವೃತ್ತಿಯ) ಸಾಲಿನ ವಿವಿಧ ಕೋರ್ಸಗಳಿಗೆ ಪ್ರವೇಶಾತಿ ಪ್ರಾರಂಭವಾಗಿವೆ ಎಂದು ಕ.ರಾ.ಮು.ವಿ.ವಿ ಕೊಪ್ಪಳ ಪ್ರಾದೇಶಿಕ ಕೇಂದ್ರದ ಪ್ರಾದೇಶಿಕ ನಿರ್ದೇಶಕರು ತಿಳಿಸಿದ್ದಾರೆ.

ಪ್ರಥಮ ಬಿಎ, ಬಿಕಾಂ, ಬಿಎಲ್ಐಎಸ್ಸಿ, ಬಿಎಸ್ಸಿ, ಬಿಬಿಎ, ಬಿಸಿಎ, ಬಿ.ಎಸ್.ಡಬ್ಲ್ಯೂ ಹಾಗೂ ಪ್ರಥಮ ಎಂಎ (ಕನ್ನಡ, ಇಂಗ್ಲೀಷ್, ಹಿಂದಿ, ಉರ್ದು, ಇತಿಹಾಸ, ಪ್ರಾಚೀನ ಇತಿಹಾಸ ಹಾಗೂ ಪುರಾತತ್ವ ಅಧ್ಯಯನ, ಶಿಕ್ಷಣ ಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜ ಶಾಸ್ತ್ರ, ಸಾರ್ವಜನಿಕ ಆಡಳಿತ, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ) ಎಂ.ಕಾಂ., ಎಂ.ಎಸ್. ಡಬ್ಲ್ಯೂ, ವಿವಿಧ ಎಂಎಸ್ಸಿ ಕೋರ್ಸಗಳಾದ ಜೀವಶಾಸ್ತ್ರ, ರಸಾಯನಶಾಸ್ತ್ರ, ಮಾನವಶಾಸ್ತ್ರ, ಸಸ್ಯಶಾಸ್ತ್ರ, ಜೈವಿಕ ತಂತ್ರಜ್ಞಾನ, ಪರಿಸರ ವಿಜ್ಞಾನ, ವೈದ್ಯಕೀಯ ಪೋಷಣೆ ಮತ್ತು ಆಹಾರ ಪದ್ದತಿ, ಆಹಾರ ಮತ್ತು ಪೋಷಣೆ, ಜೀವ ರಸಾಯನಶಾಸ್ತ್ರ, ಭೂಗೋಳಶಾಸ್ತ್ರ, ಮಾಹಿತಿ ತಂತ್ರಜ್ಞಾನ, ಸೂಕ್ಷ್ಮ ಜೀವವಿಜ್ಞಾನ, ಗಣಿತಶಾಸ್ತ್ರ, ಭೌತಶಾಸ್ತ್ರ ವಿಷಯಗಳಿಗೆ ತರಗತಿಗಳು ಪ್ರಾರಂಭವಾಗಿವೆ.

ಅರ್ಜಿ ಸಲ್ಲಿಸಲು ನವೆಂಬರ್ 15 ಕೊನೆಯ ದಿನವಾಗಿದ್ದು, ವಿದ್ಯಾರ್ಥಿಗಳು ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕವನ್ನು ಪಾವತಿ ಮಾಡಿ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯ ನಕಲು ಪ್ರತಿಯನ್ನು ಪ್ರಾದೇಶಿಕ ಕೇಂದ್ರ ಕಚೇರಿ ಕೊಪ್ಪಳ ಇಲ್ಲಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9916783555, 9743582257, 9071179986 ಹಾಗೂ ವಿವಿಯ ವೈಬ್‌ಸೈಟ್ www.ksoumysuru.ac.in ನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆದುಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.

# ಕಲ್ಲೋಳಿಯ ರಾಮಲಿಂಗೇಶ್ವರ ಪದವಿ ಕಾಲೇಜಿನ ಶಿವನಾಯ್ಕ ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆ

**ಮೂಡಲಗಿ :** ತಾಲೂಕಿನ ಕಲ್ಲೋಳಿ ಪಟ್ಟಣದ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಬಿ.ಎ ದ್ವಿತೀಯ ವರ್ಷದ ವಿದ್ಯಾರ್ಥಿ, ಎನ್.ಎಸ್.ಎಸ್. ಸ್ವಯಂಸೇವಕ ಕು. ಶಿವನಾಯ್ಕ ಅವರಾದಿ ಅವರು ಇತ್ತೀಚೆಗೆ ಕಾಗವಾಡದ ಶಿವಾನಂದ ಕಾಲೇಜಿನಲ್ಲಿ ಜರುಗಿದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪುರುಷರ ಕಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಯುನಿವರ್ಸಿಟಿ ಬ್ಲೂ ಆಗಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾನೆ.



ನವೆಂಬರ್ ತಿಂಗಳಲ್ಲಿ ತಮಿಳುನಾಡು ರಾಜ್ಯದ ಕಾಂಚಿಪುರಂನ ಎಸ್.ಆರ್.ಎಂ. ಇನ್ಸಿಟ್ಯೂಟ್ ಆಫ್ ಸೈನ್ಸ್ ಆಂಡ್ ಟೆಕ್ನಾಲಜಿ ಸ್ವಾಯತ್ತ ವಿಶ್ವವಿದ್ಯಾಲಯದಲ್ಲಿ ಜರುಗಲಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಕಬಡ್ಡಿ ಸ್ಪರ್ಧೆಯಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಲಿದ್ದಾನೆ.

ಸಾಧನೆಗೈದ ವಿದ್ಯಾರ್ಥಿಗೆ ಸಂಸ್ಥೆಯ ಚೇರಮನ್ನ ಬಸಗೌಡ ಶಿ. ಪಾಟೀಲ, ಆಡಳಿತ ಮಂಡಳಿಯ ಸರ್ವ ಸದಸ್ಯರು, ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ದೈಹಿಕ ನಿರ್ದೇಶಕ ಬಿ.ಕೆ. ಸೊಂಟನವರ, ಕ್ರೀಡಾ ಕಾರ್ಯದರ್ಶಿ ಬಿ.ಬಿ. ವಾಲಿ, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ಕಾಲೇಜಿನ ಬೋಧಕ/ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದರೆ.

# ಸಹನಾ ಅಂಗಡಿ ನೇವಿ ಅಗ್ನಿವೀರ ಸೈನ್ಯಕ್ಕೆ ಆಯ್ಕೆ ! ಸನ್ಮಾನ

**ಬಾದಾಮಿ :** ಮಾಜಿ ಸೈನಿಕ ಶಿವಪುತ್ರ ಅಂಗಡಿಯವರ ಪುತ್ರಿ ಸಹನಾ ಶಿವಪುತ್ರ ಅಂಗಡಿ ನೇವಿ(ಜಲ) ಅಗ್ನಿವೀರ ಸೈನ್ಯಕ್ಕೆ ಆಯ್ಕೆಯಾಗಿದ್ದು ಸ್ಥಳಿಯರು ಸೇ–ರಿದಂತೆ ಸಂಬಂಧೀಕರು, ಕುಟುಂಬಸ್ಥರು ಹರ್ಷ ವ್ಯಕ್ತ ಪಡಿಸಿದರು

ಸಹನಾ ಶಿವಪುತ್ರ ಅಂಗಡಿ ಅವರು ಪಿಯುಸಿ ವಿಜ್ಞಾನ ವಿಭಾಗದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣಳಾಗಿ ಪ್ರೌಢ, ಪದವಿಪೂರ್ವ ಹಾಗೂ ಪದವಿ ಹಂತದಲ್ಲಿ ಎನ್.ಸಿ.ಸಿ (ಎಬಿಸಿ) ಪ್ರಮಾಣ ಪತ್ರವನ್ನು ಪಡೆದಿದ್ದಾಳೆ, ಈಗ ಸಹನಾ ಅಂಗಡಿ ದೇಶ ರಕ್ಷಣೆಯ ನೇವಿ(ಜಲ) ಅಗ್ನಿವೀರ ಸೈನ್ಯಕ್ಕೆ ಆಯ್ಕೆಯಾಗಿದ್ದರಿಂದ ಅವರನ್ನು ಸ್ಥಳಿಕರು, ಸಂಬಂಧಿಕರು ಸನ್ಮಾನಿಸಿ ಶುಭ ಹಾರೈಸಿದರು, ಈ ಸಂದರ್ಭದಲ್ಲಿ ನೀಲಾ ಗುರಸಂಗಪ್ಪ ಅಂಗಡಿ ಹಾಗೂ ಮಾಜಿ ಸೈನಿಕ ಶಿವಪುತ್ರ ಅಂಗಡಿ, ಮಂಜುಳಾ ಶಿವಪುತ್ರ ಅಂಗಡಿ ಹಾಗೂ ಸಂಬಂಧಿಕರು ಹಾಜರಿದ್ದರು.



ನಾನು ಸೈನಿಕನಾಗಿ ದೇಶ ಸೇವೆ ಮಾಡಿದ್ದೇನೆ, ಈ ನಮ್ಮ ಮಗಳು ನನ್ನಂತೆ ದೇಶ ಸೇವೆ ಮಾಡುತ್ತೇನೆ ಎಂದು ಹೇಳುತ್ತಿದ್ದಳು ಇಂದು ಅವಳ ಕನಸು ನನಸಾಗಿದೆ, ನೇವಿ(ಜಲ) ಅಗ್ನಿವೀರ ಸೈನ್ಯಕ್ಕೆ ಆಯ್ಕೆಯಾಗಿದ್ದಕ್ಕೆ ಹೆಮ್ಮೆಯೆನಿಸುತ್ತಿದೆ

– ಶಿವಪುತ್ರ ಅಂಗಡಿ ಮಾಜಿ ಸೈನಿಕ

# ಸಾಹಿತ್ಯೇತರ ಸರ್ವಾಧ್ಯಕ್ಷರ ವಿಚಾರ ಖಂಡಿಸಿ ಹೋರಾಟ

**ಸಿಂದಗಿ :** ಮಂಡ್ಯದಲ್ಲಿ ಡಿಸೆಂಬರ್ ನಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಾಹಿತ್ಯೇತರರನ್ನು ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು ಎನ್ನುವ ವಿಚಾರ ಖಂಡಿಸಿ, ಮಾಧ್ಯಮರಂಗ ಫೌಂಡಶನ್ ವತಿಯಿಂದ ಗುರುವಾರ ತಾಲೂಕು ಆಡಳಿತ ಕಚೇರಿ ಮುಂದೆ ಹೋರಾಟ ನಡೆಸಲಾಯಿತು.



ಯುವ ಬರಹಗಾರರು, ಫೌಂಡೇಶನ್ ಪದಾಧಿಕಾರಿಗಳು, ಪತ್ರಕರ್ತರು, ಕನ್ನಡ ಪರ ಸಂಘಟನೆಗಳ ಮುಖಂಡರು, ರೈತಪರ ಸಂಘಟನೆಗಳ ಮುಖಂಡರು, ಸಾಹಿತ್ಯದ ಅಭಿಮಾನಿಗಳು ಸೇರಿದಂತೆ ಸಮಾನ ಮನಸ್ಕರೆಲ್ಲ ಸೇರಿ ಪ್ರಸ್ತುತ ಚರ್ಚೆಯಲ್ಲಿರುವ ವಿಚಾರವನ್ನು ವಿರೋಧಿಸಿ ತಹಶೀಲ್ದಾರ ಪ್ರದೀಪಕುಮಾರ ಹಿರೇಮಠ ಅವರ ಮೂಲಕ ಮುಖ್ಯಮಂತ್ರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಮಾಧ್ಯಮರಂಗ ಫೌಂಡೇಶನ್ ಅಧ್ಯಕ್ಷ, ಯುವ ಬರಹಗಾರ ನಾಗೇಶ ತಳವಾರ ಮಾತನಾಡಿ, ಕನ್ನಡ ನಾಡಿನ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕನ್ನಡ ಸಾಹಿತ್ಯ ಪರಿಷತ್ ನಡೆಸುವ ಸಮ್ಮೇಳನಕ್ಕೆ ಗೌರವ ಘನತೆಯಿದೆ. ಈಗ ಚರ್ಚೆಗೆ ಗ್ರಾಸವಾಗಿರುವ ಸಾಹಿತ್ಯೇತರರನ್ನು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಮಾಡುವ ವಿಚಾರ ಸರಿಯಾದ ಕ್ರಮವಲ್ಲ. ಇದನ್ನು ನಾವು ವಿರೋಧಿಸುತ್ತೇವೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆನಂದ ಶಾಬಾದಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಮಹೇಶ ಜೋಶಿಯವರ ನಡೆ ಸರಿಯಾದುದ್ದಲ್ಲ. ಯಾವುದೇ ಕಾರಣಕ್ಕೂ ಸಾಹಿತಿಗಳಿಗೆ ಅವಮಾನ ಮಾಡುವ ಕೆಲಸವಾಗಬಾರದು ಎಂದು ಆಕ್ರೋಶ ಹೊರ ಹಾಕಿದರು.

ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಧ ಅಧ್ಯಕ್ಷ ಪಂಡಿತ ಯಂಪೂರೆ ಮಾತನಾಡಿ, ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಸ್ಥಾನಕ್ಕೆ ಅದರದೆಯಾದ ಗೌರವವಿದೆ. ನಾಡಿಗೆ ಲೇಖಕರ ಕೊಡುಗೆ ದೊಡ್ಡದಿದ್ದು, ಅದೇ ಕ್ಷೇತ್ರದ ಸಾಧಕರನ್ನು ಹೊರತುಪಡಿಸಿ ಇತರರನ್ನು ಸರ್ವಾಧ್ಯಕ್ಷರನ್ನಾಗಿ ಮಾಡಬಾರದು ಎಂದು ಒತ್ತಾಯಿಸಿದರು.

ಪತ್ರಕರ್ತ ನಿಂಗರಾಜ ಅತನೂರ ಮಾತನಾಡಿ, ಸಾಹಿತ್ಯ ಸಮ್ಮೇಳನಕ್ಕೂ ರಾಜಕಾರಣಿಗಳನ್ನು, ಮಠಾಧೀಶರನ್ನು ಸೇರಿ ಇತರರನ್ನು ಸರ್ವಾಧ್ಯಕ್ಷರನ್ನಾಗಿ ಮಾಡುವುದು ಸರಿಯಾದ ಕ್ರಮವಲ್ಲ. ಅವರಿಗೆ ಅವರದೆಯಾದ ವೇದಿಕೆಗಳಿವೆ. ಇಲ್ಲಿ ಲೇಖಕರಿಗೆ ಆದ್ಯತೆ ನೀಡಬೇಕು. ಇಲ್ಲದೆ ಹೋದರೆ ತೀವ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಫೌಂಡೇಶನ್ ಸಹ ಕಾರ್ಯದರ್ಶಿ ಮಲ್ಲು ಹಿರೋಳ್ಳಿ, ಸದಸ್ಯ ರಮೇಶ ಪೂಜಾರಿ(ಆಲಮೇಲ), ಯುವ ಬರಹಗಾರ ಸಿದ್ದರಾಮ ಬ್ಯಾಕೋಡ, ಕನ್ನಡಪರ ಸಂಘಟನೆಯ ಮುಖಂಡರಾದ ಸಂತೋಷ ಮಣಿಗಿರಿ, ಸಂತೋಷ ಮನಗೂಳಿ, ಚಂದ್ರಶೇಖರ ದೇವರೆಡ್ಡಿ, ರೈತ ಸಂಘಟನೆಯ ಬಸವರಾಜ ರಂಜಣಗಿ, ಶಿವಕುಮಾರ ಬಿರಾದಾರ, ಬಸವರಾಜ ಕೆ ಐರೋಡಗಿ, ಪತ್ರಕರ್ತರಾದ ಮಲ್ಲಿಕಾರ್ಜುನ ಪಟ್ಟಣಶೆಟ್ಟಿ, ಮಹಾಂತೇಶ ನೂಲಾನವರ ಹಾಗೂ ರಾಜಶೇಖರ ಶೆಟ್ಟಿ, ರಾಸ್ಸರ ಕ್ಷತ್ರಿ, ರಾಮಚಂದ್ರ ಇಳಿಗೇರ, ಸುದೀಪ ಹಿರೋಳ್ಳಿ, ಕರ್ಣ ಪಾಟೀಲ, ವಿಜು ಪತ್ತಾರ ಸೇರಿದಂತೆ ಇತರರು ಭಾಗವಹಿಸಿದ್ದರು.

# 12 ಜನ ಆಟಗಾರರು ಯುನಿವರ್ಸಿಟಿ ಬ್ಲ್ಯೂ ಆಗಿ ಆಯ್ಕೆ



**ಬಾದಾಮಿ :** ನಗರದ ಎಸ್.ಬಿ.ಎಂ.ಪದವಿ ಮಹಾವಿದ್ಯಾಲಯದಲ್ಲಿ ಗುರುವಾರ ಮತ್ತು ಶುಕ್ರವಾರ ನಡೆದ ಪಂದ್ಯಾವಳಿಯಲ್ಲಿ ಪುರುಷರ ಕಬಡ್ಡಿಯಲ್ಲಿ ಈ ಕೆಳಗಿನ 12 ಜನ ಸ್ಪರ್ಧಾರ್ಥಿಗಳು ಆಯ್ಕೆಯಾಗಿ ಯುನಿವರ್ಸಿಟಿ ಬ್ಲ್ಯೂ ಆಗಿ ಆಯ್ಕೆಯಾಗಿದ್ದಾರೆ.

ಇವರು ಅಂತರಾಜ್ಯ ಕ್ರೀಡಾ ವಿಭಾಗದಲ್ಲಿ ಭಾಗವಹಿಸಲಿದ್ದಾರೆ. ಆಯ್ಕೆಯಾದ ಆಟಗಾರರ ಹೆಸರು ಮತ್ತು ಕಾಲೇಜಿನ ಹೆಸರು ಈ ಕೆಳಗಿನಂತಿ–ದೆ: ಪ್ರಜ್ವಲ ಶೆಟ್ಟಿ(ಬಿ.ಎಲ್.ಡಿ.ಇ.ಜಮಖಂಡಿ), ಯುವರಾಜ ಭಜಂತ್ರಿ(ಸ.ಪ್ರ.ದ.ಕಾ.ಹುನಗುಂದ), ಆಕಾಶ ತಳವಾರ(ಬಸವೇಶ್ವರ ಕಲಾ ಕಾಲೇಜು ಬಾಗಲಕೋಟೆ), ಸುನೀಲ ನಿಡಗುಂದಿ(ಬಸವೇಶ್ವರ ಕಲಾ ಕಾಲೇಜು ಬಾಗಲಕೋಟೆ), ನಬಿರಸಲ್ ಕಂದಗಲ್(ಸ.ಪ್ರ.ದ.ಕಾ.ಹುನಗುಂದ), ಮುದ್ದೇಶ ಸಿದ್ಧಾಪೂರ(ಆರ್.ಪಿ.ಜಿ.ಸಿ.ಬೀಳಗಿ), ಕೃಷ್ಣಾ ಲದ್ದಿ(ಬಸವೇಶ್ವರ ಕಲಾ ಕಾಲೇಜು ಬಾಗಲಕೋಟೆ), ಕಾರ್ತಿಕ ಚಿಕ್ಕನ್ನವರ(ಕುಮಕಾಳ ಪದವಿ ಕಾಲೇಜು ಮುಧೋಳ), ಕುಮಾರ ಹುಲ್ಲೂರ(ಎಸ್.ಬಿ.ಎಂ.ಪ.ಕಾ.ಬಾದಾಮಿ), ಶ್ರದ್ಧಾನಂದ ಕನ್ನೂರ(ಬಿ.ಪಿ.ಇಡಿ.ಕಾಲೇಜು ಬಾಗಲಕೋಟೆ), ಹನಮಂತ ಬ್ಯಾಕೋಡ್(ಕೆ.ಎಲ್.ಇ.ಕಲಾ ಕಾಲೇಜು ಮಹಾಲಿಂಗಪೂರ), ಅಭಿಷೇಕ ಪಾಟೀಲ(ಬಸವೇಶ್ವರ ಕಲಾ ಕಾಲೇಜು ಬಾಗಲಕೋಟೆ) ಆಯ್ಕೆಯಾಗಿದ್ದಾರೆ.

ಕಾಯ್ದಿರಿಸಿದ ಆಟಗಾರರಲ್ಲಿ ಗುರುಚರಣ ಹೂಲಿ(–ಎಸ್.ಬಿ.ಎಂ.ಬಾದಾಮಿ), ದುಗೇಶ ವಡ್ಡರ(ಸ.ಪ್ರ.ದ.ಕಾ.ಬಾದಾಮಿ), ಮಂಜುನಾಥ ಮೀಸಿ(ಭಂಡಾರಿ ಕಾಲೇಜು ಗುಳೇದಗುಡ್ಡ), ವಿಠ್ಠಲ ನಾಯಕ(ಸ.ಪ್ರ.ದ.ಕಾ.ಮುಧೋಳ), ಪ್ರಕಾಶ ಲೆಂಕೆನ್ನವರ(ಸ.ಪ್ರ.ದ.ಕಾ.ಗುಳೇದಗುಡ್ಡ), ಪ್ರಶಾಂತ ಸೊನ್ನದ(ಬಿ.ವಿ.ವಿ.ಎಸ್.ವಾಣಿಜ್ಯ ಕಾಲೇಜು ವಿದ್ಯಾಗಿರಿ ಬಾಗಲಕೋಟೆ) ಇವರು ಆಯ್ಕೆಯಾಗಿದ್ದಾರೆ ಎಂದು ಎಸ್.ಬಿ.ಎಂ.ಪದವಿ ಕಾಲೇಜಿನ ಪ್ರಾಚಾರ್ಯ, ಆಯ್ಕೆ ಸಮಿತಿಯ ಅಧ್ಯಕ್ಷ ರವೀಂದ್ರ ಎಸ್.ಮೂಲಿಮನಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಆಯ್ಕೆ ಸಮಿತಿಯ ಸದಸ್ಯರಾದ ಕುಂತಿನಾಥ ಶಿರಹಟ್ಟಿ, ಬಿ.ವೈ.ಆಲೂರ, ಮಂಜುನಾಥ ದೇವನಾಳ, ಬಿ.ಎಸ್.ಬಳಿಗೇರ ಪಾಟೀಲ ಹಾಜರಿದ್ದರು.

# ಎಸ್‌ಸಿ–ಎಸ್‌ಟಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಯೋಜನೆಗಳ ಅರಿವು ಅವಶ್ಯಕ: ಯಲ್ಲಪ್ಪ ಭಜಂತ್ರಿ

**ಮೂಡಲಗಿ :** ಎಸ್‌ಸಿ–ಎಸ್‌ಟಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಯೋಜನೆಗಳ ಅರಿವು ಅವಶ್ಯಕವಾಗಿದ್ದು ಇಂದು ಅನೇಕ ವಿದ್ಯಾರ್ಥಿಗಳು ಸರಕಾರದ ಶೈಕ್ಷಣಿಕ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದು ಸರಕಾರ ವಿದ್ಯಾರ್ಥಿಗಳಿಗಾಗಿ ಅನೇಕ ಶೈಕ್ಷಣಿಕ ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿವೇ ಅದರ ಪ್ರಯೋಜನ ಪಡೆದುಕೊಳ್ಳಲು ವಿದ್ಯಾರ್ಥಿಗಳು ಮುಂದಾಗಬೇಕೆಂದು ಮೂಡಲಗಿಯ ಎಸ್‌ಸಿ–ಎಸ್‌ಟಿ ಇಲಾಖೆಯ ವಸತಿ ನಿಲಯದ ವ್ಯವಸ್ಥಾಪಕ ಯಲ್ಲಪ್ಪ ಭಜಂತ್ರಿ ಹೇಳಿದರು.

ಪಟ್ಟಣದ ಆರ್.ಡಿ.ಎಸ್. ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ಆಯ್‌ಕ್ಯೂಎಸ್‌ಸಿ, ಎನ್‌ಎಸ್‌ಎಸ್ ಹಾಗೂ ಪರಿಶಿಷ್ಟ್ ಜಾತಿ & ಪರಿಶಿಷ್ಟ ಪಂಗಡದ ಘಟಕಗಳ ಸಹಯೋಗದಲ್ಲಿ ಹಮ್ಮಿಕೊಂಡಿರುವ ಶಿಷ್ಯವೇತನ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಗೋಕಾಕ & ಮೂಡಲಗಿ ತಾಲೂಕಗಳ ಸಮಾಜ ಕಲ್ಯಾಣ ಇಲಾಖೆಯ ಡಿಇಓ ಅಪ್ರೋಜ್ ಡೇವಿಡ್ ಮಾತನಾಡಿ ಪರಿಶಿಷ್ಟ್ ಜಾತಿ & ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಸೌಲಭ್ಯ, ಅತಿಹೆಚ್ಚು ಅಂಕಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿತರಣೆ, ಮತ್ತು ಸ್ವಉದ್ಯೋಗಕ್ಕಾಗಿ ಸಹಾಯಧನ, ವಸತಿ ವ್ಯವಸ್ಥೆ ವೃತ್ತಿಪರ ಕೋರ್ಸ್‌ಗಳಿಗೆ ತರಬೇತಿ ಇನ್ನಿತರ ಸೌಲಭ್ಯಗಳು ಇರುತ್ತೇವೆ ಅವುಗಳ ಪ್ರಯೋಜನ ಪಡೆದುಕೊಳ್ಳಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ರಾಜು ಕಡಕೋಳ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಸತ್ಯಪ್ಪ ಗೋಟೂರ ವಹಿಸಿಕೊಂಡು ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜು ಎಸ್‌ಸಿ–ಎಸ್‌ಟಿ ನೋಡಲ್ ಅಧಿಕಾರಿ ಸಂಜೀವ ಮಂಟೂರ, ಉಪನ್ಯಾಸಕಿ ಗೀತಾ ಹಿರೇಮಠ, ಮಲ್ಲಪ್ಪ ಪಾಟೀಲ, ಸುನೀಲ ಸತ್ತಿ ಮತ್ತಿತತರು ಹಾಜರಿದ್ದರು. ಉಪನ್ಯಾಸಕಿ ರೋಹಿಣಿ ಕಾಂಬಳೆ ನಿರೂಪಿಸಿದರು ಘಟಕಾಧಿಕಾರಿ ಎಮ್.ಬಿ.ಪರಮಶೆಟ್ಟಿ ಸ್ವಾಗತಿಸಿದರು, ಉಪನ್ಯಾಸಕ ರಾಜು ಪತ್ತಾರ ವಂದಿಸಿದರು.

# ಬೆಳೆ ಪರಿಹಾರ ನೀಡಲು ಮನವಿ



**ನವಲಗುಂದ:** ವಿಧಾನಸಭಾ ಕ್ಷೇತ್ರದದಲ್ಲಿ ವಾಡಿಕೆಗಿಂತ ಅತೀ ಹೆಚ್ಚು ಮಳೆ ಸುರಿದಿದ್ದರಿಂದ ರಸ್ತೆ, ಸೇತುವೆ ಹಾಳಾಗಿವೆ ಹಾಗೇ ಬೆಳೆ ಪರಿಹಾರ ಮತ್ತು ಬೆಳೆ ಸಾಲ ಮನ್ನಾ ಮಾಡುವಂತೆ ಕರ್ನಾಟಕ ರಕ್ಷಣಾ ವೇದಿಕೆ ನವಲಗುಂದ ತಾಲೂಕ ಘಟಕ ವತಿಯಿಂದ ಆಗ್ರಹಿಸಿ ತಹಶೀಲ್ದಾರ್ ಇಲಾಖೆ ಪ್ರ ದರ್ಜೆ ಸಹಾಯಕ ಐ ಆರ್ ಭಜಂತ್ರಿ ಮುಖಾಂತರ ಸಿಎಂ ಸಿದ್ದರಾಮಯ್ಯನವರಿಗೆ ಮನವಿ ಸಲ್ಲಿಸಲಾಯಿತು.

ಈ ವೇಳೆಯಲ್ಲಿ ಅಧ್ಯಕ್ಷ ಸಿರಾಜ್ ಧಾರವಾಡ ಮಾತನಾಡಿ ನಗರ ಹಾಗೂ ಗ್ರಾಮಗಳಲ್ಲಿ ಅತೀಯಾಗಿ ಮಳೆಯಾಗಿದ್ದರಿಂದ ಮನೆಗಳು ನೆಲಕಚ್ಚಿವೆ, ಜಮೀನುಗಳಲ್ಲಿ ಬೆಣ್ಣೆಹಳ್ಳ ಮತ್ತು ತುಪ್ಪರಿಹಳ್ಳಗಳಲ್ಲಿನ ಪ್ರವಾಹದಿಂದ ಜಮೀನುಗಳಲ್ಲಿ ನೀರು ನುಗ್ಗಿ ಬೆಳೆಗಳನ್ನು ನಾಶವಾಗಿವೆ.

ಆದ್ದರಿಂದ ಕೂಡಲೆ ಸರ್ಕಾರ ಬೆಳೆ ಪರಿಹಾರ ಹಾಗೂ ಮನೆ ಬಿದ್ದವರಿಗೆ ಪರಿಹಾರ ನೀಡಬೇಕು ಎಂದರು.

ರೈತರು ಸಂಕಷ್ಟದಲ್ಲಿದ್ದು ಕೂಡಲೆ ರೈತರ ಬೆಳೆ ಸಾಲ ಮನ್ನಾ ಮಾಡಬೇಕು. ಮತ್ತು ತಾಲೂಕಿನಾದ್ಯಂತ ಅತೀಯಾದ ಮಳೆಯಿಂದ ರಸ್ತೆ ಮತ್ತು ಸೇತುವೆಗಳು ಹಾಳಾಗಿದ್ದು, ಶಾಲಾ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಬಸ್ ಸಂಚಾರ ಇಲ್ಲದೆ ತೊಂದರೆಯಾಗುತ್ತಿದ್ದು, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಹಾಳಾದ ರಸ್ತೆ ಮತ್ತು ಸೇತುವೆಗಳನ್ನು ಸರಿಪಡಿಸಲು ಕ್ರಮ ಕೈಗೊಂಡು ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಆಗ್ರಹಿಸಿ, ಇಲ್ಲವಾದಲ್ಲಿ ನಮ್ಮ ಸಂಘಟನೆ ವತಿಯಿಂದ ರಾಜ್ಯಾದ್ಯಂತ ಉಗ್ರವಾದ ಹೋರಾಟ ಕೈಗೊಳ್ಳುವುದು ಎಂದರು. ರಿಯಾಜ್ ಅಹ್ಮದನಾಶಿಪುಡಿ, ಇಮ್ತಿಯಾಜ್ ಜಮಖಾನ, ರಾಜು ಜಾಲಿಹಾಳ, ಅನ್ವರ್ ಮೂಲಿಮನಿ, ಆಸ್ಪಕ್ ಹುಣಿಸಿಮರದ, ಮೆಹಬೂಬ್ ಚಾಹುಸೇನ್, ನಮೀದ್ ಖಾಜಿ, ಸಂತೋಷ ಸರಾವರಿ, ಆಶಿಫ್ ಹುನಗುಂದ, ಕಮಾಲಸಾಬ್ ಗದಗ, ಇಜಾಜ್ ಹುಗ್ಗಿ, ಶರೀಫ್ ಗೋವನಕೊಪ್ಪ ಸೇರಿದಂತೆ ಅನೇಕರು ಹಾಜರಿದ್ದರು.

# ಜಿಲ್ಲಾ ಮಟ್ಟದ ಜನತಾ ದರ್ಶನ: ಅಹವಾಲು ಸ್ವೀಕಾರ

**ಧಾರವಾಡ** : ಕಾರ್ಮಿಕ ಇಲಾಖೆ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ ಲಾಡ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ 7 ನೇ ಜಿಲ್ಲಾ ಮಟ್ಟದ ಜನ ದರ್ಶನ ಕಾರ್ಯಕ್ರಮದಲ್ಲಿ ಜಿಲ್ಲೆಯ ಮಹಾನಗರ ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸಂಘ, ಸಂಸ್ಥೆ ಹಾಗೂ ಸಾರ್ವಜನಿಕರಿಂದ ಸುಮಾರು 213 ಅಹವಾಲುಗಳನ್ನು ಸ್ವೀಕರಿಸಲಾಯಿತು.



ಸಾರ್ವಜನಿಕರಿಂದ ಅಹವಾಲು, ಮನವಿಗಳನ್ನು ಸ್ವೀಕರಿಸಿ ಮಾತನಾಡಿದ ಸಚಿವ ಸಂತೋಷ ಲಾಡ ಅವರು, ಸಲ್ಲಿಕೆ ಆಗಿರುವ ಎಲ್ಲ ಅಹವಾಲುಗಳನ್ನು ಕಾಲಮಿತಿಯಲ್ಲಿ ಪರಿಹರಿಸಲು ಕ್ರಮಕೈಗೊಳ್ಳಲಾಗುತ್ತದೆ. ಆದರೆ ಕೆಲವು ಮನವಿಗಳು ಸರಕಾರದ ನೀತಿ, ನಿರೂಪಣೆಗೆ ಒಳಪಡಬೇಕಾಗುತ್ತದೆ. ಮತ್ತು ಕೆಲವು ಕೋರ್ಟ ವ್ಯಾಜ್ಯಗಳಾಗಿರುತ್ತವೆ. ಇವುಗಳಿಗೆ ಹಿಂಬರಹ ನೀಡಿ, ಕಳಿಸಲಾಗುತ್ತದೆ. ಕೆಲವು ಸಾರ್ವಜನಿಕರು ತಮ್ಮ ವಯಕ್ತಿಕ ಸಮಸ್ಯೆ, ಆಸ್ತಿ ಜಗಳ, ಸಂಬಂದಿಕರ ಕೇಸ್, ಆಂತರಿಕ ಜಗಳ ಹೀಗೆ ವಿವಿಧ ರೀತಿಯ ಸಮಸ್ಯೆಗಳನ್ನು ಸಲ್ಲಿಸುತ್ತಾರೆ. ಇವುಗಳನ್ನು ಸಹ ಸಹಾನುಬೂತಿಯಿಂದ ಪರಿಶೀಲಿಸಿ, ಸಾಧ್ಯವಾದಷ್ಟು ಅವರ ಸಮಸ್ಯೆಗಳ ಪರಿಹಾರ ದೊರಕಿಸಲು ಸಂಬಂಧಿಸಿದ ಇಲಾಖೆಗಳಿಗೆ ನಿರ್ದೇಶನ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಜಿಲ್ಲಾ ಮಟ್ಟದಲ್ಲಿ ಜರುಗಿದ ಕಳೆದ ಆರು ಜನತಾ ದರ್ಶನ ಕಾರ್ಯಕ್ರಮಗಳಲ್ಲಿಯೇ ಸುಮಾರು 1242 ಅಹವಾಲುಗಳನ್ನು ಮತ್ತು ಇಂದಿನ 7ನೇ ಸಭೆಯಲ್ಲಿ 213 ಅಹವಾಲುಗಳು ಸೇರಿ ಇಲ್ಲಿವರೆಗೆ ಒಟ್ಟು 1455 ಅರ್ಜಿಗಳನ್ನು ಸೀಕರಿಸಲಾಗಿದೆ. ಇದರಲ್ಲಿ ಇಂದು ಸಲ್ಲಿಕೆ ಆಗಿರುವ ಅರ್ಜಿಗಳನ್ನು ಹೊರತುಪಡಿಸಿ, ಹಿಂದಿನ ಎಲ್ಲ ಅಹವಾಲು, ಅರ್ಜಿಗಳನ್ನು ನಮ್ಮ ಜಿಲ್ಲಾ ಹಂತದಲ್ಲಿ ಇತ್ಯರ್ಥಗೊಳಿಸಿ, ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಇಂದಿನ ಜನತಾ ದರ್ಶನ; ಜನತಾ ದರ್ಶನ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಸ್ಥಳಗಳಿಂದ ಆಗಮಿಸಿದ ಸಾರ್ವಜನಿಕರು, ಸಂಘ ಸಂಸ್ಥೆ ಪ್ರತಿನಿಧಿಗಳು ತಮ್ಮ ಸಮಸ್ಯೆಗಳ ಬಗ್ಗೆ ಸಹಾಯ ಸೌಲಭ್ಯಗಳ ಬಗ್ಗೆ ವಿವಿಧ ಇಲಾಖೆಗಳಿಗೆ ಅರ್ಜಿಗಳನ್ನು ಸಲ್ಲಿಸಿದರು.

ಪ್ರಮುಖವಾಗಿ ಕಂದಾಯ ಇಲಾಖೆ-62, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ-28, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ ರಾಜ್ ಇಲಾಖೆ-37, ಕಾರ್ಮಿಕ-12, ಹೆಸ್ಕಾಂ -9, ಹಿಂದುಳಿದ ವರ್ಗಗಳ ಇಲಾಖೆ-9, ಶಾಲಾ ಶಿಕ್ಷಣ ಇಲಾಖೆ-6, ಸಾರಿಗೆ ಇಲಾಖೆ-6, ಗೃಹ ಇಲಾಖೆ-5, ಸಮಾಜ ಕಲ್ಯಾಣ ಇಲಾಖೆ-5, ಆರೋಗ್ಯ ಇಲಾಖೆ-5, ಸಹಕಾರ ಇಲಾಖೆ-4, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ-4, ಲೋಕೋಪಯೋಗಿ ಇಲಾಖೆ-4, ವಸತಿ ಇಲಾಖೆ-4, ಕೃಷಿ ಇಲಾಖೆ-3, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ-3, ಅರಣ್ಯ ಮತ್ತು ಪರಿಸರ ಇಲಾಖೆ-2, ಆಡಳಿತ ಸುಧಾರಣೆ ಇಲಾಖೆ-1, ಕನ್ನಡ ಮತ್ತು ಸಂಸ್ಕೃತಿ ಇಲಾಖೆ-1, ಸಣ್ಣ ನೀರಾವರಿ-1, ಅಲ್ಪಸಂಖ್ಯಾತರ ಇಲಾಖೆ-1, ತೋಟಗಾರಿಕೆ-1 ಅಹವಾಲುಗಳು ಸೇರಿದಂತೆ ಒಟ್ಟು 213 ಅಹವಾಲುಗಳನ್ನು ಸಲ್ಲಿಸಿದ್ದಾರೆ.

ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮಗಳು: ಸೆಪ್ಟೆಂಬರ್ 25, 2023 ರಂದು ಸೃಜನಾ ರಂಗ ಮಂದಿರದಲ್ಲಿ ಜರುಗಿದ ಮೊದಲ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 450 ಅರ್ಜಿಗಳನ್ನು ಸ್ವೀಕರಿಸಿ, ಎಲ್ಲವನ್ನು ವಿಲೇವಾರಿ ಮಾಡಲಾಗಿದೆ.

ನವೆಂಬರ್ 6, 2023 ರಂದು ಸೃಜನಾ ರಂಗ ಮಂದಿರದಲ್ಲಿ ಜರುಗಿದ ಎರಡನೇಯ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 197 ಅರ್ಜಿಗಳನ್ನು ಸ್ವೀಕರಿಸಿ, ವಿಲೇವಾರಿ ಮಾಡಲಾಗಿದೆ. ಡಿಸೆಂಬರ್ 23, 2023 ರಂದು ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗಿದ ಮೂರನೇಯ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 177 ಅರ್ಜಿಗಳನ್ನು ಸ್ವೀಕರಿಸಿ, ವಿಲೇವಾರಿ ಮಾಡಲಾಗಿದೆ.

ಜನೇವರಿ 29, 2024 ರಂದು ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗಿದ ನಾಲ್ಕನೇಯ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 112 ಅರ್ಜಿಗಳನ್ನು ಸ್ವೀಕರಿಸಿ, ವಿಲೇವಾರಿ ಮಾಡಲಾಗಿದೆ. ಜೂನ್ 26, 2024 ರಂದು ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗಿದ ಐದನೇಯ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 175 ಅರ್ಜಿಗಳನ್ನು ಸ್ವೀಕರಿಸಿ, ವಿಲೇವಾರಿ ಮಾಡಲಾಗಿದೆ. ಸೆಪ್ಟೆಂಬರ್ 10, 2024 ರಂದು ಹುಬ್ಬಳ್ಳಿಯ ಸವಾಯಿ ಗಂಧರ್ವ ಸಭಾಭವನದಲ್ಲಿ ಜರುಗಿದ ಆರನೇಯ ಜನತಾದರ್ಶನ ಕಾರ್ಯಕ್ರಮದಲ್ಲಿ ಒಟ್ಟು 131 ಅರ್ಜಿಗಳನ್ನು ಸ್ವೀಕರಿಸಿ, ವಿಲೇವಾರಿ ಮಾಡಲಾಗಿದೆ. ಅ.21 ರಂದು ಜಿಲ್ಲಾ ಪಂಚಾಯತ ಸಭಾಭವನದಲ್ಲಿ ಜರುಗಿದ ಏಳನೇಯ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 213 ಅರ್ಜಿಗಳನ್ನು ಸ್ವೀಕರಿಸಿದ್ದಾರೆ.

# ಸ್ವಯಂ ಪ್ರೇರಿತ ರಕ್ತದಾನ ಶಿಬಿರ

**ಮುನವಳ್ಳಿ** : ಜಿಲ್ಲಾ ಪಂಚಾಯತ ಬೆಳಗಾವಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೆಳಗಾವಿ ತಾಲೂಕ ಪಂಚಾಯತ ಸವದತ್ತಿ ತಾಲೂಕಾ ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆ ಮತ್ತು ಪಟ್ಟಣದ ಪುರಸಭೆ ಕಾರ್ಯಾಲಯ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಜರುಗಿತು.

ಸೋಮಶೇಖರ ಮಠದ ಶ್ರೀ ಮುರುಘೇಂದ್ರ ಶ್ರೀಗಳು ಉದ್ಘಾಟಿಸಿ ಮಾತನಾಡಿ ರಕ್ತದಾನ ಶ್ರೇಷ್ಠದಾನ ಪುಣ್ಯ ಕಾರ್ಯವಾಗಿದೆ ರಕ್ತದಾನದಿಂದ ಇನ್ನೊಂದು ಜೀವವನ್ನ ಉಳಿಸಬಹುದು ಎಂದರು.

ಪುರಸಭೆ ಅಧ್ಯಕ್ಷ ಸಿ.ಬಿ.ಬಾಳಿ ಮಾತನಾಡಿ ಅರ್ಹ ವ್ಯೆಕ್ತಿಗಳು ರಕ್ತದಾನ ಮಾಡಿ ಇನ್ನೊಬ್ಬರ ಜೀವನವನ್ನು ಉಳಿಸಿ ಎಂದರು.

ಡಾ॥ ಎಸ್.ಎಲ್ ದಂಡಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಎಪಿ.ಎಮ್.ಸಿ ಅಧ್ಯಕ್ಷ ಚಂದ್ರು ಜಂಬ್ರಿ ಮಾತನಾಡಿ ರಕ್ತದಾನ ಮತ್ತೋಬ್ಬರ ಜೀವನಕ್ಕೆ ಸಂಜೀವಿನಿಯಾಗಿ ಮತ್ತೊಬ್ಬರ ಜೀವ ಉಳಿಸಲು ಅನಕೂಲ ವಾಗುವುದು ಎಂದರು.

ಡಾ॥ ನವೀನ ನಿಜಗುಲಿ, ಮೇಘಾ ಜಯಶೀಲಾ ಅಬ್ದುಲ್ ಬಿಸ್ತಿ ಡಾ॥ ಶ್ರೀದೇವಿ ಬೊಬಾಟೆ, ಭೀಮ್ಸ ರಕ್ತ ಬಂಡಾರ ಬೆಳಗಾವಿ ಪುರಸಭೆಯ ಉಪಾಧ್ಯಕ್ಷೆ ಕಾಶವ್ವ ಹಿರೇಮೇತ್ರಿ, ಮಿರಾಸಾಬ ವಟ್ನಾಳ, ಸಮೀರ ಚೂರಿಕಾನ, ಈಶ್ವರ ಕರಿಕಟ್ಟಿ, ರೇಣುಕಾ ಶುಗರ್ಸ ಎ.ಡಿ.ಎಂ ಸಂಜೀವಕುಮಾರ ನಾಯಕ, ಆರೋಗ್ಯ ಇಲಾಖೆಯ ಸಿಬ್ಬಂದಿಯವರು, ಆಶಾ ಕಾರ್ಯಕರ್ತೆಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ವಿಶ್ವಾಸ ಹಿರೇಮಠ ಕಾರ್ಯಕ್ರಮ ನಿರೂಪಣೆ ಹಾಗೂ ಸುಭಾಸ ಹುಜರತ್ತಿ ಸ್ವಾಗತಿಸಿದರು, ಜಿ.ಎಲ್.ಭಂಡಾರಿ ವಂದಿಸಿದರು.

# ಕವನ ಸಂಕಲನ ಬಿಡುಗಡೆ

**ಧಾರವಾಡ** : ಛಾಯಾ ಚಿತ್ರಗಳು ಯಾರು ಅಳಿದರೂ ನಿರಂತವಾಗಿ ಉಳಿಯುವ ಕಾಲದ ಕುರುಹುಗಳುಎಂದು ಹಾವೇರಿಯ ಬಂಡಾಯ ಕವಿ ಸತೀಶಕುಲಕರ್ಣಿಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಕವಿ ಶಿಕ್ಷಕ ಕಿರಣ ಜತ್ತಿ ಅವರ ಜೀವನಯಾನ ಎಂಬ ಚಿತ್ರಕಾವ್ಯ ಸಂಕಲನವನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಮುಂದುವರೆದು ಮಾತನಾಡಿದ ಅವರು, ವಿದ್ಯಾವರ್ಧಕ ಸಂಘದ ಆವರಣದಲ್ಲಿರುವ ನೂರಾರು ಭಾವಚಿತ್ರಗಳು ಈ ಮಾತಿಗೆ ಸಾಕ್ಷಿ. ಕಾಲದ ಒಂದೊಂದು ಜೀವನ ವಿಧಾನವನ್ನು ಸಾಧನಾ ಪಥಗಳನ್ನು ಸಾರುವಂತಿವೆ. ಕಲಾವಿದನ ಒಂದು ಚಿತ್ರ, ಒಂದು ಕಲಾಕೃತಿ ನೂರಾರು ನೆನಪುಗಳನ್ನು ಹುಟ್ಟು ಹಾಕಬಲ್ಲವು ಎಂದರು.

ಸನ್ಮಾನ ಸ್ವೀಕರಿಸಿದ ಕಿರಣಜ-ತ್ತಿ ಅವರು ಮಾತನಾಡುತ್ತಾ, ಎಲ್ಲಿಯೊ ಮೂಲೆಯಲ್ಲಿದ್ದ ನನ್ನನ್ನು ನಾಡಿಗೆ ಪರಿಚಯಿಸಿದ ಹಾವೇರಿ ಕಲಾ ಬಳಗ ಮತ್ತು ವಿದ್ಯಾವರ್ಧಕ ಸಂಘಕ್ಕೆ ನನ್ನ ನಮನಗಳನ್ನು ಸದಾ ಕಾಲ ಸಲ್ಲಿಸುವೆ ಎಂದರು.




ಸಮಾರಂಭದಲ್ಲಿ ಛಾಯಾಗ್ರಾಹಕ ಕುಮಾರ ಕಾಟೇನಹಳ್ಳಿ, ನೇತ್ರಾ ಅಂಗಡಿ, ಸಂದೀಪ ಕುಲಕರ್ಣಿ, ಕಾವ್ಯಾ ಕುಲಕಲರ್ಣಿ, ಎಸ್.ಬಿ. ಪಂಪಣ್ಣನವರ, ರಾಜೇಂದ್ರ ಹೆಗಡೆ ಮುಂತಾದವರು ಉಪಸ್ಥಿತರಿದ್ದರು.

ಆರಂಭದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿ ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ಕಾರ್ಯಕ್ರಮ ನಿರ್ವಹಿಸಿದರು. ಕೊನೆಯಲ್ಲಿ ಹಾವೇರಿ ಕಲಾ ಬಳಗದ ಸಂಚಾಲಕ ಪೃಥ್ವಿರಾಜ ಬೆಟಗೇರಿ ವಂದಿಸಿದರು. ಹಾವೇರಿ ಮತ್ತು ಬಾಗಲಕೋಟಿ ಕಲಾಭಿಮಾನಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

## ಪೆನ್ನಿನಿಂದ ದೇಶದ ಇತಿಹಾಸ ಬದಲಿಸಬಹುದು: ಸಿದ್ದಲಿಂಗಶ್ರೀ

**ತಾಳಿಕೋಟೆ:** ಗ್ರಾಮಪಟ್ಟಣಗಳಲ್ಲಿಯ ಪಾಲಕರು ಮೊದಲು ತಮ್ಮ ಮಕ್ಕಳಿಗೆ ಪೆನ್ನು ಹಿಡಿಯುವದನ್ನು ಕಲಿಸಬೇಕು ಪೆನ್ನು ಹಿಡಿಯುವದರೊಂದಿಗೆ ಮಕ್ಕಳು ಮುನ್ನುಗ್ಗುತ್ತಾ ಸಾಗಿದರೆ ಆ ಪೆನ್ನಿನ ಬರವಣಿಗೆಯ ಮೂಲಕ ಇಡೀ ದೇಶದ ಇತಿಹಾಸವನ್ನು ಬದಲಿಸಬಹುದಾಗಿದೆ ಎಂದು ಶ್ರೀ ಖಾಸ್ಗತೇಶ್ವರ ಮಠದ ಬಾಲ ಶಿವಯೋಗಿ ಶ್ರೀ ಸಿದ್ದಲಿಂಗ ದೇವರು ನುಡಿದರು.



ಮಂಗಳವಾರರಂದು ಸ್ಥಳೀಯ ವಿಕಾಸ ಪಬ್ಲಿಕ್ ಶಾಲೆಯಲ್ಲಿ ಏರ್ಪಡಿಸಲಾದ ಆಯ್‌ಆಯ್‌ಟಿ & ನೀಟ್ ಎಂಬ ಪ್ರಾಥಮಿಕ ಹಂತದಲ್ಲಿಯೇ ವಿಧ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡುವ ಕುರಿತು 51 ಕಂಪ್ಯೂಟರ್‌ಗಳುಳ್ಳ ಟೆಕ್ ಲ್ಯಾಬ್ ಉದ್ಘಾಟನೆ ಸಮಾರಂಭವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಅವರು ಯಾವಾಗ ವಿದ್ಯಾರ್ಥಿಯಾದವನು ದೊಡ್ಡವರಿಗೆ ಗೌರವ ಕೊಡುವದು, ಹಿರಿಯರು ಕಿರಿಯರು ಎಂಬ ಭಾವನೆಯೊಂದಿಗೆ ಅವರವರ ತಕ್ಕಂತೆ ನಡೆದುಕೊಳ್ಳುವ ಕಾರ್ಯ ಮಾಡುವದಲ್ಲದೇ ಒಳ್ಳೆಯ ಸಂಸ್ಕಾರ ಉಳ್ಳವನಾಗಿ ಮುಂದುವರೆಯುತ್ತಾ ಸಾಗಿದರೆ ಇದಕ್ಕಿಂತ ಉತ್ತಮ ಶಿಕ್ಷಣ ಮತ್ತೊಂದು ಇಲ್ಲಾವೆಂದರು. ಗೀಡಕ್ಕೆ ನೀರು ಹಾಕಿದಾಗ ಅದು ಬೆಳೆದು ಹೆಮ್ಮರವಾಗಿ ಹಣ್ಣು ಹಂಪಲಗಳನ್ನು ನೀಡುತ್ತದೆ ಆದರೆ ಅದು ಬೆಳೆಸಿದವನಿಗೂ ಅಷ್ಟೇ ಅದಕ್ಕೆ ಕಲ್ಲು ಒಗೆದು ಹಣ್ಣು ಪಡೆಯುವವನಿಗೂ ಅಷ್ಟೇ ಯಾಕೆಂದರೆ ಅದು ತನಗಾದ ನೋವನ್ನು ಯಾರಿಗೂ ಹೇಳದೇ ತನ್ನ ಫಲವನ್ನು ನೀಡುವ ಕಾಯಕ ಮಾಡುತ್ತದೆಯೋ ಅದೇ ರೀತಿ ಮಾನವರಾದ ನಾವು ಎಲ್ಲರಿಗೂ ಒಳ್ಳೆಯದಾಗುವಂತಹ ಕಾರ್ಯ ಮಾಡಬೇಕೆಂದ ಶ್ರೀಗಳು ಈ ಶಾಲೆಯ ಅಧ್ಯಕ್ಷ ರಾಮನಗೌಡ ಪಾಟೀಲರು ಶಾಲೆಯನ್ನು ಉದ್ದರಿಸುವಂತಹ ಕಾರ್ಯಕ್ಕೆ ಮುಂದಾಗಿ ಇಂದು ಕಂಪ್ಯೂಟರ್ ಶಿಕ್ಷಣಕ್ಕೆ ಒತ್ತು ನೀಡಿ ವಿದ್ಯಾರ್ಥಿಗಳಿಗೆ ಅನುವು ಮಾಡಿಕೊಟ್ಟಿರುವದು ಸಂತಸ ತಂದಿದೆ ಎಂದ ಶ್ರೀಗಳು ಯಾವ ಯಾವ ವಿದ್ಯಾರ್ಥಿಗೆ ಯಾವ ಯಾವ ಆಸೆ ಇರುತ್ತದೆಯೋ ಅಂತಹ ಶಿಕ್ಷಣ ನೀಡಿದರೆ ಆತ ಮುಂದೊಂದು ದಿನ ಜಗತ್ ಪ್ರಸಿದ್ದನಾಗಬಲ್ಲ ಎಂಬುದರ ಕುರಿತು ರಾಷ್ಟ್ರ ವ್ಯಾಪಿ ಭಹುಮಾನ ಪಡೆದ ನೀರಾಬಿ ಚೋಪ್ರಾ ಕುರಿತು ಹಾಗೂ ಬೀಲ್‌ಗೇಟ್ ಅವರ ಕುರಿತು ಬಹು ಮಾರ್ಮಿಕವಾಗಿ ವಿವರಿಸಿ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿದರು.

ಇನ್ನೋರ್ವ ವಿಕಾಸ ಪಬ್ಲೀಕ್ ಸ್ಕೂಲ್‌ನ ಪ್ರಾಚಾರ್ಯರಾದ ಬಸವರಾಜ ಐತಾಪೂರ ಅವರು ಮಾತನಾಡಿ ಆಯ್‌ಆಯ್‌ಸಿ ಸೇಂಟರ್ ಭಾರತದಲ್ಲಿ ಒಂದು ಒಳ್ಳೆಯ ಸೇಂಟರ್ ಆಗಿ ಪರಿಣಮಿಸಿದೆ ಬನಸಾರ ಕೋಚಿಂಗ್ ಸೇಂಟರ್‌ದಲ್ಲಿ

ಲಕ್ಷ ಜನ ಓದುತ್ತಿದ್ದರ ಕುರಿತು ಮಕ್ಕಳಿಗೆ ನೀಟ್ ಫೌಂಡೇಶನ್ ವಿದ್ಯಾಭ್ಯಾಸ ನೀಡುತ್ತಾ ಅವರಿಗೆ ತಯಾರಿಸುವಂತಹ ಕಾರ್ಯ ಇಲ್ಲಿ ನಡೆಯಲಿದೆ ಇದರಿಂದ ಮುಂದೆ ಅವರು ಪಿಯುಸಿಗೆ ಹೋದರೂ ನಾನೇನು ಆಗಬೇಕೆಂಬುದರ ಕುರಿತು ಅವರಿಗೆ ಅರ್ಥವಾಗಲಿದೆ ಎಂದರು. ಜ್ಞಾನದಿಂದ ಪೆನ್ನು ಹತ್ತಬೇಕು ಇದರಿಂದ ಸುಂದರವಾದ ಮಾರ್ಗದೊರೆಯಲಿದೆ ಎಂದು ಹೇಳಿದ ಅವರು ವಿದ್ಯಾರ್ಥಿಗಳಿಗೆ ಪರಿಕ್ಷೆ ಎಂಬುದು ಹಬ್ಬವಾಗಿರಬೇಕು ಅದರಿಂದ ಆನಂದ ಪಡಬೇಕು ಗಾಭರಿಯಾಗುವದು ಬೇಡಾ ಅದಕ್ಕಾಗಿ ತಿಳುವಳಿಕೆ ಎಂಬುದು ಅಗತ್ಯವಾಗಿ ಬೇಕಾಗುತ್ತದೆ ಎಂದು ವಿಕಾಸ್ ಶಾಲೆಯಲ್ಲಿ ಕಲಿತು ನಾನು ಬಂದಿದ್ದೇನೆಂದು ಇಲ್ಲಿ ಕಲಿತ ವಿದ್ಯಾರ್ಥಿಗಳು ಈ ಶಾಲೆಯ ಹೆಸರನ್ನು ಹೇಳಿ ಮುಂದೊಂದು ದಿನ ಉನ್ನತ ಸ್ಥಾನ ಪಡೆದಾಗ ಗೌರವಿಸಿದರೆ ಸಾಕೆಂದು ಹೇಳಿದ ಅವರು ವಿದ್ಯಾರ್ಥಿಯಾದವನು ಆಡಳಿತ ಮಂಡಳಿಯವರ ಹಾಗೂ ಪಾಲಕರ ಶಿಕ್ಷಕರನ್ನು ಗೌರವಿಸುತ್ತಾ ಸಾಗಬೇಕೆಂದರು.

ಇನ್ನೋರ್ವಸನ್ಮಾನಸ್ವಿಕರಿಸಿನಿವೃತ್ತಶಿಕ್ಷಕಆರ್.ಬಿ.ದಾನಿ ಮಾತನಾಡಿ ಲ್ಯಾಬ್ ಉದ್ಘಾಟನೆ, ಕಂಪ್ಯೂಟರ್ ಪರಿಚಯ, ಇಂಗ್ಲೀಷ ಮತ್ತು ಕನ್ನಡದೊಂದಿಗೆ ಈ ವಿಕಾಸ ಪಬ್ಲಿಕ್ ಸ್ಕೂಲ್‌ನಲ್ಲಿ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ನೀಡುತ್ತಾ ಉತ್ತುಂಗಕ್ಕೇರಿಸುತ್ತಾ ಸಾಗಿದ ಪ್ರಾಚಾರ್ಯರ ಹಾಗೂ ಶಿಕ್ಷಕ ಕಾರ್ಯ ವೈಖರ್ಯ ಗುಣಗಾನಮಯವಾಗಿದೆ ಎಂದು ಹೇಳಿದ ಅವರು ಈ ತಮ್ಮ ಮಕ್ಕಳ ವ್ಯವಸ್ಥೆ ಕುರಿತು ಪಾಲಕರು ಕೂಡಾ ಅರ್ಥೈಸಿಕೊಂಡು ನಡೆದು ಗುಣಮಟ್ಟದ ಶಿಕ್ಷಣಕ್ಕೆ ಮಕ್ಕಳಿಗೆ ಅನುವು ಮಾಡಿಕೊಡಬೇಕೆಂದು ಉಪಸ್ಥಿತ ಪಾಲಕರಿಗೂ ಸಹ ತಿಳಿ ಹೇಳಿದರಲ್ಲದೇ ಶಾಲೆಯ ಆಡಳಿತ ಮಂಡಳಿಯವರ ಕಾರ್ಯ ವೈಖರ್ಯ ಕುರಿತು ಸಹ ಗುಣಗಾನ ಮಾಡಿದರು.

ಇದೇ ಸಮಯದಲ್ಲಿ ಹೆಚ್ಚಿನ ಅಂಕ ಗಳಿಸಿ ರ್‍ಯಾಂಕ್ ಪಡೆದ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ಮತ್ತು ಟಾಫ್ 5 ಸ್ಥಾನ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ ಗೌರವಿಸಲಾಯಿತು.

ವಿಕಾಸ ಪಬ್ಲೀಕ್ ಶಾಲೆಯ ಅಧ್ಯಕ್ಷರಾದ ರಾಮನಗೌಡ ಪಾಟೀಲ ಅವರ ಅಪೇಕ್ಷೆಯಂತೆ ಅವರು ಶಿಕ್ಷಣ ಪಡೆದ ನಿವೃತ್ತ ಶಿಕ್ಷಕರಾದ ಆರ್.ಆರ್.ಬಡಿಗೇರ, ಡಿ.ವ್ಹಿ.ಬಡಿಗೇರ, ಸಿ.ವ್ಹಿ.ಮೇಣಸಿನಕಾಯಿ, ಆರ್.ಎಲ್. ಕೊಪ್ಪದ, ಆರ್.ಬಿ.ದಾನಿ, ಬಿ.ಎನ್.ಬೆನಕಟ್ಟಿ, ಪಿಬಿ ಭಂಟನೂರ, ಆರ್.ಟಿ.ಪಾಟೀಲ, ಎಂ.ಎ.ಬಾಗವಾಡಿ, ಆರ್.ಬಿ.ಪಾಟೀಲ, ಆರ್.ಬಿ.ದಮ್ಮೂರಮಠ, ಸಿ.ಆರ್.ಸಿ.ರಾಜು ವಿಜಾಪೂರ ಅವರಿಗೆ ಸನ್ಮಾನಿಸಿ ಗೌರವಿಸಿದರು.

ವಿಕಾಸ್ ಪಬ್ಲೀಕ್ ಸ್ಕೂಲ್‌ನ ಗೌರವ ಅಧ್ಯಕ್ಷರಾದ ಡಾ.ವ್ಹಿ.ಎಸ್.ಕಾರ್ಚಿ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಶಾಲಾ ಅಧ್ಯಕ್ಷ ರಾಮನಗೌಡ ಬಾಗೇವಾಡಿ, ಕಾರ್ಯದರ್ಶಿ ವಿರೇಶ ಬಾಗೇವಾಡಿ, ಎಲ್ಲ ಆಡಳಿತ ಮಂಡಳಿಯ ಸದಸ್ಯರು, ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ಹೇಮಂತ ಅರವಟಗಿಮಠ ಸ್ವಾಗತಿಸಿದರು. ಗುಂಡುರಾವ್ ಧನಪಾಲ ಪರಿಚಯಿಸಿದರು. ಅಶೋಕ ಗೌಡರ ನಿರೂಪಿಸಿದರು. ಧರ್ಮಣ್ಣ ಸರ್ ವಂದಿಸಿದರು.

# ಜೀವನಾಮೃತ ನೀಡಿದವರು ಬಸವಾದಿ ಶರಣರು: ಕುಂಟೋಜಿ

**ವಿಜಯಪುರ** : 12ನೇ ಶತಮಾನದ ಬಸವಾದಿ ಶರಣರು ಭೌತಿಕ, ಅಧ್ಯಾತ್ಮಿಕ, ಸತ್ಯ ತತ್ವಗಳನ್ನು ಸಾಮರಸ್ಯಗೊಳಿಸಿ ಇಹಪರ ಎಂಬ ಅಖಂಡ ಪರಿಪೂರ್ಣ ನಿತ್ಯ ಸತ್ಯ ಬದುಕಿನ ಶಿವಪಥವನ್ನು ಲೋಕಕ್ಕೆ ನೀಡಿದ ಮಹಾಂತರವರು. ಅಂತಹ ಸತ್ಯ ಶುದ್ಧ ಕಾಯಕದಿಂದ ನೆಮ್ಮದಿ, ಸಂತೃಪ್ತಿ ಭಾವ ಲಭಿಸುವುದು ಎಂದು ಉಪನ್ಯಾಸಕ ವಿ.ಎನ್. ಕುಂಟೆ-ೂೕಜಿ ಹೇಳಿದರು.

ನಗರದ ವೀರಶೈವ ಲಿಂಗಾಯತ ಸಭಾಭವನದಲ್ಲಿ ಏರ್ಪಡಿಸಿದ ಮಾಸಿಕ ಶಿವಾನುಭವ ಗೋಷ್ಠಿಯಲ್ಲಿ ಶಿವಶರಣೆ ಅಯ್ದಕ್ಕಿ ಲಕ್ಕಮ್ಮನವರ ಅನುಭಾವ ಕುರಿತು ಅವರು ಮಾತನಾಡಿದರು.

ಶಿವಶರಣೆ ಆಯ್ದಕ್ಕಿ ಲಕ್ಕಮ್ಮ ನಿಸ್ವಾರ್ಥ ಬದುಕನ್ನು ಬಾಳಿ ತತ್ವ ಆದರ್ಶಗಳಿಂದ ನುಡಿದಂತೆ ನಡೆದವರು. ನಿಷ್ಠೆ, ಭಕ್ತಿ, ಶ್ರುದ್ದೆ, ಪ್ರಾಮಾಣಿಕತೆಯಿಂದ ಅಕ್ಕಿಯನ್ನು ಆಯ್ದುಕೊಂಡು ತಂದು ದಾಸೋಹ ಪ್ರಸಾದವನ್ನು ಎಲ್ಲ ಭಕ್ತ ಶರಣರಿಗೆ ಉಣಬಡಿಸಿದವಳು. ಅಮರೇಶ್ವರ ಲಿಂಗ ಅಂಕಿತನಾಮ ಇಟ್ಟುಕೊಂಡು ರಚಿಸಿದಂತಹ 25 ವಚನಗಳು ಮಾತ್ರ ದೊರೆತಿವೆ. ಅವೆಲ್ಲವೂ ಸಮಾಜದ ಒಳತಿಗಾಗಿ ಆಚಾರ-ವಿಚಾರದಿಂದ ಕೂಡಿದಂತವು. ಆಯ್ದಕ್ಕಿ ಲಕ್ಕಮ್ಮನವರ ವಚನಗಳು ಶ್ರೇಷ್ಠ ಅಮೃತ ನುಡಿ. ಅವುಗಳನ್ನು ಅವರ ಆದರ್ಶಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ ಎಂದರು.




ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ವಿ.ಸಿ. ನಾಗಠಾಣ ಮಾತನಾಡಿ, ಶರಣರ ಚಿಂತನೆಗಳನ್ನು ಕೇಳಿ ಭಾಗಿಯಾಗುವುದರ ಮೂಲಕ ಶವಶರಣೆ ಆಯ್ದಕ್ಕಿ ಲಕ್ಕಮ್ಮನವರ ಆಚಾರ ವಿಚಾರ ಅನುಭವ ತತ್ವಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೋಂಡು ಬಸವಣ್ಣನವರ ಪ್ರೀತಿಗೆ ಪಾತ್ರರಾಗಿ ಸತ್ಯ ಶುದ್ದ ಕಾಯಕ ಮಾಡಿ ಸರಳ ಸುಂದರ ವಚನಗಳನ್ನು ರಚಿಸಿದಂತವರು. ನಾವು ಅವುಗಳನ್ನು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ ಎಂದರು.

ಸಹದೇವ ನಾಡಗೌಡರ ಮಾತನಾಡಿ, ಬಸವ ಧರ್ಮದಲ್ಲಿ ಗುರುವಿಗೆ ಅತ್ಯಂತ ಪೂಜ್ಯನೀಯ ಸ್ಥಾನವಿದೆ. ಭಕ್ತರ ಕಣ್ಣಿಗೆ ಕಾಣದ ದೇವರೆಂದರೆ ಗುರು. ಭಕ್ತರು ಗುರುವನ್ನೇ ದೇವರೆಂದು ಶ್ರುದ್ಧೆ ಭಕ್ತಿ ಪೂಜ್ಯ ಭಾವದಿಂದ ನಾವು ಲಿಂಗಪೂಜೆಯ ಮುಲಕ ಗುರುವನ್ನು ಕಾಣಬಹುದು ಎಂದರು

ಶರಣೆ ಅಕ್ಕಮಹಾದೇವಿ ಬುರ್ಲಿ, ನೂತನ ಬ್ಯಾಕೋಡ, ಶಾರದಾ ಕುಲ್ಲೆ, ದೊಡ್ಡಣ್ಣ ಭಜಂತ್ರಿ, ಮಲ್ಲಿಕಾರ್ಜುನ ಅಮರಣ್ಣವರ, ಮಹಾದೇವ ಹಾಲಳ್ಳಿ, ಅಮರೇಶ ಸಾಲಕ್ಕಿ, ಪರಶುರಾಮ ಪೋಳ, ಶಿವಪುತ್ರ ಪೋಳ, ಬಿ.ಟಿ. ಈಶ್ವರಗೊಂಡ, ಎಸ್.ವಾಯ್. ಗದಗ ಉಪಸ್ಥಿತರಿದ್ದರು.

ಎಂ.ಜಿ. ಯಾದವಾಡ ಸ್ವಾಗತಿಸಿದರು. ಸಾಹಿತಿ ಸಂಗಮೇಶ ಬದಾಮಿ ನಿರೂಪಿಸಿದರು. ವಿಠ್ಠಲ ತೇಲಿ ವಂದಿಸಿದರು.

# ಪತಿಭಾವಂತ ಕ್ರೀಡಾಪಟುಗಳಿಗೆ ತರಬೇತಿಯ ಕೊರತೆ: ಹಾಸಿಂಪೀರ ವಾಲಿಕಾರ

**ವಿಜಯಪುರ** : ಜಿಲ್ಲೆಯಲ್ಲಿ ಸಾಕಷ್ಟು ಪ್ರತಿಭಾವಂತ ಕ್ರೀಡಾಪಟುಗಳು ಇದ್ದರೂ ಅವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ತರಬೇತಿ ಕೊರತೆಯಿಂದ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಅಭಿಪ್ರಾಯ ವ್ಯಕ್ತಪಡಿಸಿದರು. ಮಂಗಳವಾರ ಮಹಾಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸಂಸ್ಥೆಯ ಸಭಾಂಗಣದಲ್ಲಿ ಹಿಮಾಚಲ ರಾಜ್ಯದ ಕುಲುಮಿನಲ್ಲಿ ನಡೆದ ರಾಷ್ಟ್ರೀಯ ಟೆನಿಸ್ ಬಾಲ್ ಚಾಂಪಿಯನ್‌ಶಿಪ್ ಕ್ರೀಡೆಯಲ್ಲಿ ಭಾಗವಹಿಸಿ ತೃತೀಯ ಸ್ಥಾನ ಪಡೆದ ಕರ್ನಾಟಕ ರಾಜ್ಯ ತಂಡದ ಮಹಿಳಾ ಆಟಗಾರ್ತಿಯರಿಗೆ ಮತ್ತು ಉತ್ತರ ಕರ್ನಾಟಕ ಬಾಲಕರ ತಂಡ ಆಟಗಾರರಿಗೆ ಮತ್ತು ತಂಡದ ತರಬೇತಿಗಾರರಿಗೆ ಅಭಿನಂದನ ಸಮಾರಂಭವನ್ನು ಕರ್ನಾಟಕ ರಾಜ್ಯ ಮತ್ತು ವಿಜಯಪುರ ಉತ್ತರ ಕರ್ನಾಟಕ ಟೆನ್ನಿಸ್ ಬಾಲ್ ಕ್ರಿಕೆಟ ಸಂಸ್ಥೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು, ಲಾಯಿನ್ಸ ಕ್ಲಬ್ ಪರಿವಾರ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.




ರಾಜ್ಯ ಟೆನ್ನಿಸ್ ಬಾಲ್ ಕ್ರಿಕೆಟ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ಅಶೋಕ ಜಾಧವ ಮಾತನಾಡಿ, ಕ್ರೀಡಾಪಟುಗಳು ತರಬೇತಿಯಲ್ಲಿ ತಲ್ಲಿನರಾಗಿ ತಮ್ಮ ಆತ್ಮ ವಿಶ್ವಾಸದಿಂದ ಕೌಶಲ್ಯಗಳನ್ನು ಸೂಕ್ತ ಸಮಯದಲ್ಲಿ ಪ್ರದರ್ಶನ ಮಾಡುವ ಕ್ಷಮತೆ ಹೊಂದಿದರೆ ಯಶಸ್ವಿ ಕ್ರೀಡಾಪಟುವಾಗಿ ಗೆಲವು ಸಾಧಿಸಲು ಸಾಧ್ಯ. ತಂಡ ಹೊಂದಾಣಿಕೆ ಇದ್ದಲ್ಲಿ ಗೆಲವು ಸಾಧ್ಯ ಎಂದರು.

ಉತ್ತರ ಕರ್ನಾಟಕ ಟೆನ್ನಿಸ್ ಬಾಲ್ ಕ್ರಿ-ಕೆಟ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗ ರವಿ ಚವ್ವಾಣ ಮಾತನಾಡಿ, ಆಟಗಾರರಲ್ಲಿ ಛಲ ಹಾಗೂ ಹಂಬಲವಿದ್ದರೆ ಗೆಲವು ಖಚಿತ. ಉತ್ತರ ಕರ್ನಾಟಕ ಭಾಗದ ಆಟಗಾರರು ದೈಹಿಕವಾಗಿ ಸದೃಢರು. ಅವರಿಗೆ ಸರಿಯಾದ ತರಬೇತಿ ಶಿಬಿರದ ಅತ್ಯವಶ್ಯಕತೆ ಇದೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸೈನಿಕ ಅಧಿಕಾರಿ ಸಂಕೇತ ನಾಯಕ, ವಿಶ್ರಾಂತ ದೈಹಿಕ ನಿರ್ದೇಶಕಿ ವಿದ್ಯಾ ಕೋಟೆನ್ನವರ ಹಾಗೂ ಕೆ.ಎಸ್.ಸಿ.ಎ ಎಮ್.ಎನ್ ಉಟಗಿ ಮಾತನಾಡಿದರು.

ಚಲನಚಿತ್ರ ಮಾಲಿಕ ಹಾಗೂ ವಿತರಕ ಹಮೀದ ಬೀಳಗಿ, ಸಂಸ್ಥೆಯ ಪದಾಧಿಕಾರಿ ಶಶಿಕಲಾ ಇಜೇರಿ, ನ್ಯಾಯವಾದಿ ಜಾಫರ ಅಂಗಡಿ, ವಿಶ್ರಾಂತ ಸಹಕಾರಿ ನೋಂದಣಾಧಿಕಾರಿ ಚಿದಾನಂದ ನಿಂಬಾಳ ವೇದಿಕೆಯ ಮೇಲಿದ್ದರು.

ಆಟಗಾರರಾದ ರಾಜೇಶ್ವರಿ ಮಾಗಿ, ನಾಯಕಿ ವೈಷ್ಣವಿ ಬೋವಿ, ಪದ್ಮಶ್ರೀ ಖಂಡೇರಾಜು, ಅಕ್ಷತಾ ಜಾಧವ. ಆಶಾ ಮುಂಗೋವಿ, ಸ್ವಾತಿ ನಾಟಿಕಾರ, ಜಿ.ಎಲ್. ಮಾರ್ಗರೆಟ್, ಅಪ್ರೋಜ ಹತ್ತರಕಿಹಾಳ, ವಿದ್ಯಾಶ್ರೀ ಪಾಟೀಲ, ಹಂಸಿಕಾ. ರುಕ್ಮೀಣಿ ಅಗಸರ. ಸುಚಿತ್ರಾ ರಾಠೋಡ, ಮಹಿಂತಾಜ ಹುಲಗೂರ ಅವರನ್ನು ಗೌರವಿಸಿ ಪ್ರಮಾಣ ಪತ್ರ ನೀಡಲಾಯಿತು. ಇದೇ ಸಂದರ್ಭದಲ್ಲಿ ತರಬೇತುದಾರರಾದ ಚಾಂದವಶೀಮ ಮುಖಾದಾಮ್, ಜಗದೀಶ ದೊಡಮನಿ, ಸೋಮಶೇಖರ ರಾಠೋಡ ಅವರನ್ನು ಗೌರವಿಸಲಾಯಿತು. ಕೃಷ್ಣ, ಪ್ರೊ. ಶಿವಕುಮಾರ ಉಕ್ಕಲಿ, ಪ್ರೊ. ಲತಾ ಪಾಟೀಲ, ಜಿ.ಎಸ್. ಬಳ್ಳೂರ, ಇಂದುಮತಿ ಕನ್ನೂರ, ಅಪ್ಪು ರಾಠೋಡ ಹಾಗೂ ಆರ್.ಕೆ ಕಾಲೇಜಿನ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ನಾಗೇಶ ಡೋಣೂರ ಹಾಗೂ ಸೋಮಶೇಖರ ರಾಠೋಡ ಪ್ರಾರ್ಥಿಸಿದರು. ಸುರೇಶ ಬಿಜಾಪುರ ನಿರೂಪಿಸಿದರು. ಅಬ್ಬಾಸ ತಡಲಗಿ ವಂದಿಸಿದರು.







# ರಬಕವಿ–ಬನಹಟ್ಟಿ: ಸಡಗರದ ರಾಜ್ಯೋತ್ಸವ ಆಚರಣೆಗೆ ನಿರ್ಧಾರ

**ರಬಕವಿ–ಬನಹಟ್ಟಿ :** ಕನ್ನಡನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಸ್ಮರಿಸುವ ಮೂಲಕ ಇಂದಿನ ಯುವಪೀಳಿಗೆಗೆ ನಾಡಿನ ಶ್ರೇಷ್ಠತೆಯ ಬಗ್ಗೆ ಹೆಮ್ಮೆ ಮೂಡಿಸುವುದು ಇಂದಿನ ಅತ್ಯಗತ್ಯತೆಯಾಗಿದೆ ಎಂದು ರಬಕವಿ–ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ನುಡಿದರು.



ರಾಜ್ಯೋತ್ಸವ ಆಚರಣೆಗೂ ಮುನ್ನ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಚೇರಿಯಲ್ಲಿ ನಡೆವ ನಾಡದೇವಿ ಭುವನೇಶ್ವರಿ ಭಾವಚಿತ್ರದ ಪೂಜಾ ಸಮಾರಂಭದ ಬಳಿಕ ರಬಕವಿಯ ರಾಜ್ಯೋತ್ಸವ ಆಚರಣಾ ಸಮೀತಿ ಆಯೋಜಿಸಿರುವ ಹೊಸ ಬಸ್‌ನಿಲ್ದಾಣದಿಂದ ರೂಪಗಳ ಮೂಲಕ ನಡೆಯುವ ಮೆರವಣಿಗೆಯು ರಬಕವಿ ಹಳೆಯ ಬಸ್‌ನಿಲ್ದಾಣ ಬಳಿಯ ಬಾಲಿಕೆಯರ ಪ್ರೌಢಶಾಲೆ ಎದುರಿನ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು. ರಾಜ್ಯೋತ್ಸವ ಆಚರಣೆಯ ವಿವಿಧ ಹೊಣೆಗಾರಿಕೆಗಳನ್ನು ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ವಹಿಸಲಾಯಿತು. ಮೆರವಣಿಗೆ ಸಾಗುವ ಮತ್ತು ಸಮಾರಂಭ ನಡೆಯುವ ಪ್ರದೇಶಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳುವಂತೆ ನಗರಸಭೆ ಸಿಬ್ಬಂದಿಗೆ ಸೂಚಿಸಲಾಯಿತು. ಪ್ರಮುಖ ಶಾಲೆಗಳನ್ನು ಸಂಪರ್ಕಿಸಿ ನಾಡಿನ ಪ್ರಮುಖ ಹೋರಾಟಗಾರರ ಮತ್ತು ಸಾಧಕರ ರೂಪಕಗಳನ್ನು ನಿರ್ವಹಿಸಲು ಶಾಲಾ ಶಿಕ್ಷಣ ಇಲಾಖೆಯ ಬಿ.ಎಂ.ಹೊಸಮನಿ, ಅರ್ಜುನ ಕಾಖಂಡಕಿಯವರಿಗೆ ಸೂಚಿಸಲಾಯಿತು. ರೂಕಗಳನ್ನು ಮೆರವಣಿಗೆಯುದ್ದಕ್ಕೂ ಸಾಗಿಸಲು ವಾಹನದ ವ್ಯವಸ್ಥೆ ಮಾಡುವಂತೆ ಹಾಗೂ ವೇದಿಕೆಯಲ್ಲಿ ಸರ್ಕಾರದ ಹಿಂದಿನ ಸುತ್ತೋಲೆಯಂತೆ 5 ಕನ್ನಡದ ನಾಡಗೀತೆಗಳನ್ನು ಕಡ್ಡಾಯವಾಗಿ ಹಾಡಿಸಲು ಸ್ವಾದಿ ಸೂಚಿಸಿದರು.

ಸಭೆಯಲ್ಲಿ ತಾಪಂ ಕಾರ್ಯನಿರ್ವಹಣಾಧಿಕಾರಿ ಸಿದ್ದಪ್ಪ ಪಟ್ಟಿಹಾಳ, ನಗರಸಭೆ ಸಿಬ್ಬಂದಿ ಮುಖೇಶ ಬನಹಟ್ಟಿ, ಚಿದಾನಂದ ಸೊಲ್ಲಾಪೂರ, ಶಿವಾನಂದ ಬಾಗಲಕೋಟಮಠ, ಪೋಲೀಸ್ ಇಲಾಖೆಯ ಎಎಸ್‌ಐಗಳಾದ ಶಿವಣ್ಣಾ, ಕೆ.ಪಿ.ಸವದತ್ತಿ, ಎಸ್.ಎಂ.ಕುಂಬಾರ, ಮ.ಕೃ.ಮೇಗಾಡಿ, ಕನ್ನಡಪರ ಸಂಘಟನೆಗಳ ಮುಖಂಡರಾದ ರಾಜೇಶ್ವರಿ ಹಿರೇಮಠ, ಸುರೇಶ ಗೋಕಾಂವಿ, ಬಸೀರ ಜಮಾದಾರ ಸೇರಿದಂತೆ ವಿವಿಧ ಇಲಾಖೆಗಳ ಪ್ರತಿನಿಧಿಗಳು ಭಾಗಿಯಾಗಿದ್ದರು.







"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State